# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 285 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 22.05.2025 • ಗುರುವಾರ • ಪುಟ:04 • ಬೆಲೆ:2
Volume:02 • Issue: 285 • PRGI No:KARKAN/2023/88055 • VIJAYANAGARA • 22.05.2025 • Thursday • Page:04 • Rs:2





1,30,000+
Digital E-PAPER READERS
To book Classified Display Ad
in HAMPI TIMES
Please call on
9448633038
No.1 HAMPI TIMES LEADING PRINT & DIGITAL District News Paper



ಅರಿದೆಡೆ ಶರಣ

ದಿನಾಂಕ: 26-05-2025
ಸೋಮವಾರ ರಾತ್ರಿ
ಶ್ರೀ ಶನೇಶ್ವರ ದೇವರ ಪುರಾಣ
ಪ್ರವಚನ, ಭಜನೆ

ಶ್ರೀ ಶನೇಶ್ವರಸ್ವಾಮಿ ಜಯಂತಿ

ದಿನಾಂಕ: 27-05-2025 ಮಂಗಳವಾರ ಬೆಳಿಗ್ಗೆ 5-00 ಕ್ಕೆ ಗಂಗಾಪೂಜೆ,
ಬೆಳಿಗ್ಗೆ 6.00 ಗಂಟೆಗೆ ದೇವಸ್ಥಾನದಲ್ಲಿ ರುದ್ರಾಭಿಷೇಕ, ವಿಶೇಷ ಪೂಜೆ, ತೈಲಾಭಿಷೇಕ, ಪುಷ್ಪಲಂಕಾರ

ಮರೆತರೆ ಮಾನವ

7090966698
9448795049
7019370389
9481342032



ಪೂಜಾ ಸೇವಾ ವಿವರ : ನಿರಂತರ ಪೂಜೆ | ನವಗ್ರಹ ಶಾಂತಿ ಪೂಜೆ | ಸರ್ವಸೇವೆ ಪೂಜೆ | ರುದ್ರಾಭಿಷೇಕ | ಎಲೆ ಪೂಜೆ | ತೈಲಾಭಿಷೇಕ | ಪಂಚಾಮೃತಾಭಿಷೇಕ

ಶ್ರೀ ಕ್ಷೇತ್ರ ಶನೇಶ್ವರ ದೇವಸ್ಥಾನ ಸಮಿತಿ (ರಿ) ರಾಷ್ಟ್ರೀಯ ಹೆದ್ದಾರಿ ನಂ.50, 13ನೇ ವಾರ್ಡ್, ಪಂಚಾಚಾರ್ಯ ನಗರ, ಟಿ.ಬಿ.ಡ್ಯಾಂ, ಹೊಸಪೇಟೆ-583225


ಮನಸ್ಸು ಎಲ್ಲದಕ್ಕೂ ಮೂಲ,
ಅದನ್ನು ಸರಿಪಡಿಸಿಕೊಳ್ಳದ ಹೊರತು
ಇನ್ನಾವುದು ಸರಿಯಾಗದು
– ಡಿ.ವಿ.ಜಿ


ಹಂಪಿ ಟೈಮ್ಸ್



SCAN TO WATCH
SSLC ಹೈಸ್ಕೋರ್ ಸೀಕ್ರೇಟ್ ಏನು ಗೊತ್ತಾ
ಟಾಪರ್ ಇಂದುಶ್ರೀ ಮಾತಲ್ಲೇ ಕೇಳಿ...


## ದೇವಾಲಯ ದರ್ಶನ




ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಆನಂದ ಬಾಣ




# ಖಾಸಗಿ ಶಾಲೆಗಳಿಗೆ ಡಿಸಿ ಖಡಕ್ ಎಚ್ಚರಿಕೆ

## ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚನೆ | ಸರ್ಕಾರದ ನಿಯಮಾವಳಿ ಪಾಲನೆ ಕಡ್ಡಾಯ | ಪ್ರವೇಶ ಪರೀಕ್ಷೆ ಸಲ್ಲದು ಬೇರೆ ಇಲಾಖೆಯ ಅಧಿಕಾರಿಗಳಿಂದ ಪರಿಶೀಲನೆ | ನಿಯಮ ಉಲ್ಲಂಘಿಸಿದಲ್ಲಿ ಶಾಶ್ವತವಾಗಿ ಮುಚ್ಚಿಸಲು ಕ್ರಮ

■ **ಹಂಪಿ ಟೈಮ್ಸ್ ಚಿತ್ರದುರ್ಗ**

ಖಾಸಗಿ ಅನುದಾನ ರಹಿತ ಶಾಲೆಗಳು ಸರ್ಕಾರದ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು. ಸರ್ಕಾರದ ನಿಯಮಾವಳಿ ಉಲ್ಲಂಘಿಸುವ ಶಿಕ್ಷಣ ಸಂಸ್ಥೆಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮಜರುಗಿಸ ಲಾಗುವುದು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಖಾಸಗಿ ಅನುದಾನರಹಿತ ಶಾಲೆಗಳ ಆಡಳಿತ ಮಂಡಳಿಗಳು ತಮ್ಮ ಜವಾಬ್ದಾರಿಗಳನ್ನು ಮರೆಯಬಾರದು ಎಂದು ತಿಳಿಸಿದ ಅವರು, ಸರ್ಕಾರದ ನಿಯಮಗಳನ್ನು ಪಾಲನೆ ಮಾಡಬೇಕು. ಯಾವುದೇ ಕಾರಣಕ್ಕೂ ನಿಯಮಗಳ ಉಲ್ಲಂಘನೆ ಮಾಡಬಾರದು. ಒಂದು ವೇಳೆ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರದ ನಿಯಮಾವಳಿ ಉಲ್ಲಂಘನೆ ಕುರಿತು ದೂರು ಬಂದರೆ ತಕ್ಷಣವೇ ಕ್ರಮಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಖಾಸಗಿ ಶೈಕ್ಷಣಿಕ ಸಂಸ್ಥೆಗಳು ಪ್ರವೇಶ ಶುಲ್ಕದ ಮಾಹಿತಿ ಯನ್ನು ಪ್ರಚುರ ಪಡಿಸದೇ ಇರುವುದು, ಒಂದೇ ಬಾರಿಗೆ ಡೋನೇಷನ್ ಶುಲ್ಕ ಕಟ್ಟುವಂತೆ ಬೇಡಿಕೆಯಿಡುವುದು, ಮೂಲಸೌಲಭ್ಯಗಳ ಕೊರತೆ, ನಾಮಕಾವಸ್ಥೆಗೆ ಶಿಕ್ಷಣ ಸಂಸ್ಥೆ ನಡೆಸುವುದು, ಉತ್ತಮ ಫಲಿತಾಂಶಕ್ಕೆ ಪಡೆಯಲು ಗಮನಹರಿಸದೇ ಇರುವುದು, ಶಿಕ್ಷಕರಿಗೆ ಓರಿಯಂಟೇಷನ್ ಕಾರ್ಯಾಗಾರ ಮಾಡದೇ ಇರುವುದು, ಅರ್ಹತೆ ಇಲ್ಲದೇ ಇರುವ ಶಿಕ್ಷಕರ ನೇಮಕ ಮಾಡಿಕೊಳ್ಳುವುದು ಸೇರಿದಂತೆ ಕೆಲವು ಶಿಕ್ಷಣ ಸಂಸ್ಥೆಗಳ ವಿರುದ್ಧ ದೂರುಗಳು ಬಂದಿವೆ. ಹಾಗಾಗಿ ಶಾಲಾ ದಾಖಲಾತಿ ಪ್ರಕ್ರಿಯೆಯಲ್ಲಿ ನಿಯಮಗಳ ಉಲ್ಲಂಘನೆಯಾಗದಂತೆ ಕ್ರಮವಹಿಸಬೇಕು. ಮುಖ್ಯವಾಗಿ ಉತ್ತಮ ಫಲಿತಾಂಶ ಪಡೆಯುವ ನಿಟ್ಟಿನಲ್ಲಿ ಶಿಕ್ಷಕರಿಗೆ ಓರಿಯಂಟೇಷನ್ ಕಾರ್ಯಾಗಾರ,



ಬೋಧನಾ ಕೌಶಲ್ಯಗಳ ಅಭಿವೃದ್ಧಿಗಾಗಿ ಪುನಃಶ್ಚೇತನ ಕಾರ್ಯಾಗಾರಗಳನ್ನು ಕಾಲಕಾಲಕ್ಕೆ ಹಮ್ಮಿಕೊಳ್ಳಬೇಕು ಎಂದು ಹೇಳಿದರು.

**ತಾಲ್ಲೂಕುವಾರು ನೋಡಲ್ ಅಧಿಕಾರಿಗಳ ನೇಮಕ:** ಖಾಸಗಿ ಅನುದಾನ ರಹಿತ ಶಾಲೆಗಳಲ್ಲಿ ಸರ್ಕಾರದ ನಿಯಮಾವಳಿ ಪ್ರಕಾರದ ದಾಖಲಾತಿ ಪ್ರಕ್ರಿಯೆ ನಿರ್ವಹಿಸ ಲಾಗಿದೆಯೇ ಎಂಬುದನ್ನು ಪರಿಶೀಲನೆ ಮಾಡುವ ನಿಟ್ಟಿನಲ್ಲಿ ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳನ್ನು ಹೊರತುಪಡಿಸಿ ಬೇರೆ ಇಲಾಖೆಯ ಅಧಿಕಾರಿಗಳನ್ನು ತಾಲ್ಲೂಕುವಾರು ನೋಡಲ್ ಅಧಿಕಾರಿಗಳ ನೇಮಕ ಮಾಡಿ ಪರಿಶೀಲನೆ ನಡೆಸಲಾಗುವುದು. ನಿಯಮ ಉಲ್ಲಂಘನೆ ಕಂಡುಬಂದರೆ ಶಾಶ್ವತವಾಗಿ ಶಿಕ್ಷಣ ಮುಚ್ಚಿಸಲು ಕ್ರಮಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ತಿಳಿಸಿದರು.

ಸೀಟುಗಳ ಲಭ್ಯತೆ ಮತ್ತು ಪ್ರವೇಶಾತಿ ವೇಳಾಪಟ್ಟಿಯನ್ನು ಕಡ್ಡಾಯವಾಗಿ ಶಾಲಾ ಫಲಕದಲ್ಲಿ ಪ್ರಕಟಿಸಬೇಕು. ಪ್ರತಿ ವರ್ಷ ಏಪ್ರಿಲ್ ತಿಂಗಳ ನಂತರವೇ ಪ್ರವೇಶ ಪ್ರಕ್ರಿಯೆ ಪ್ರಾರಂಭಿಸಬೇಕು. ಪ್ರತಿ ಶಾಲೆಯಲ್ಲೂ ಇಲಾಖಾ ಮಾರ್ಗದರ್ಶನದಂತೆ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಅಗತ್ಯ ಮೂಲಭೂತ ಸೌಲಭ್ಯಗಳಾದ ಪ್ರತ್ಯೇಕವಾಗಿ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ಆಟದ ಮೈದಾನ, ಪಾಠೋಪಕರಣಗಳು ಮತ್ತು ಪೀಠೋಪಕರಣಗಳ ಇತರೆ ಸೌಲಭ್ಯಗಳನ್ನು ಕಲ್ಪಿಸಬೇಕು. ಶಾಲೆಗಳಲ್ಲಿ ಮಕ್ಕಳ ಸುರಕ್ಷತೆಗಾಗಿ ಅಗ್ನಿನಂದಕ, ಸಿಸಿ ಕ್ಯಾಮೆರಾ ಕಡ್ಡಾಯವಾಗಿ ಅಳವಡಿಸಬೇಕು ಎಂದು ಸೂಚನೆ ನೀಡಿದರು.

ಶಾಲಾ ಮಕ್ಕಳ ಮೇಲಿನ ಲೈಂಗಿಕ ಕಿರುಕುಳದಂತಹ ಪ್ರಕರಣಗಳನ್ನು ತಪ್ಪಿಸಲು ಶಾಲಾ ಪರಿಮಿತಿಯಲ್ಲಿ ಇ ಆಡಳಿತ ಮಂಡಳಿಗಳು ಸುರಕ್ಷತೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ಖಾಸಗಿ ಶಾಲೆಗಳಲ್ಲಿ ನಿಗಧಿತ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಬೇಕು ಎಂದು ತಾಕೀತು ಮಾಡಿದರು.

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ಆರ್. ಮಂಜುನಾಥ ಮಾತನಾಡಿ, ಜಿಲ್ಲೆಯಲ್ಲಿ ಅನುದಾನ ಸಹಿತ ಶಾಲೆಗಳಲ್ಲಿ 73 ಪ್ರಾಥಮಿಕ ಶಾಲೆಗಳು, 204 ಪ್ರೌಢಶಾಲೆಗಳು ಇವೆ. ಅನುದಾನ ರಹಿತ ಶಾಲೆಗಳಲ್ಲಿ 252 ಪ್ರಾಥಮಿಕ ಶಾಲೆಗಳು ಹಾಗೂ 138 ಪ್ರೌಢಶಾಲೆಗಳು ಇವೆ ಎಂದು ಸಭೆಗೆ ಮಾಹಿತಿ ನೀಡಿದರು.

> **2025–26ನೇ ಶೈಕ್ಷಣಿಕ ವರ್ಷದಿಂದ ಎಲ್‌ಕೆಜಿ ದಾಖಲಾತಿಗೆ 4 ವರ್ಷ ಪೂರ್ಣಗೊಂಡಿರುವ, ಯುಕೆಜಿ ದಾಖಲಾತಿಗೆ 5 ವರ್ಷ ಪೂರ್ಣಗೊಂಡಿರುವ ಮಕ್ಕಳನ್ನು ಹಾಗೂ ಜೂನ್ 1ನೇ ತಾರೀಖಿಗೆ 5 ವರ್ಷ 5 ತಿಂಗಳು ಪೂರ್ಣಗೊಂಡಿರುವ ಮಕ್ಕಳನ್ನು 2025–26ನೇ ಶೈಕ್ಷಣಿಕ ವರ್ಷಕ್ಕೆ ಮಾತ್ರ ಒಂದನೇ ತರಗತಿಗೆ ದಾಖಲು ಮಾಡಿಕೊಳ್ಳಲು ಅವಕಾಶವಿದೆ.**
> – ಎಂ.ಆರ್.ಮಂಜುನಾಥ
> ಉಪನಿರ್ದೇಶಕ, ಶಾಲಾ ಶಿಕ್ಷಣ ಇಲಾಖೆ, ಚಿತ್ರದುರ್ಗ

ಪ್ರತಿ ವರ್ಷ ದಾಖಲಾತಿ ಪ್ರಕ್ರಿಯೆಯಲ್ಲಿ ಸರ್ಕಾರದ ನಿಯಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು. ಮೀಸಲಾತಿ ಅನ್ವಯಿಸಿ ದಾಖಲಾತಿ ಮಾಡಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಎಲ್‌ಕೆಜಿ ಮತ್ತು 1ನೇ ತರಗತಿಗೆ ದಾಖಲಾತಿ ಪ್ರಕ್ರಿಯೆ ನಿರ್ವಹಿಸುವಾಗ ಪ್ರವೇಶ ಪರೀಕ್ಷೆ ಸಂದರ್ಶನ ನಡೆಸತಕ್ಕದ್ದಲ್ಲ ಎಂದು ಹೇಳಿದರು.

2025–26ನೇ ಸಾಲಿಗೆ ಆರ್‌ಟಿಇ ಅಡಿ ಮೀಸಲಿರುವ ಸೀಟುಗಳಿಗೆ ಪ್ರವೇಶಾತಿ ಮತ್ತು ದಾಖಲಾತಿ ಪ್ರಕ್ರಿಯೆ ಅನುದಾನಿತ ಶಾಲೆಗಳಿಗೆ ಮಾತ್ರ ಪ್ರವೇಶ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಆರ್‌ಟಿಇ ಅಡಿಯಲ್ಲಿ 56 ಶಾಲೆಗಳಲ್ಲಿ 247 ಸೀಟುಗಳು ಲಭ್ಯವಿವೆ ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಜೆ.ಸೋಮಶೇಖರ್, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಪುಟ್ಟಸ್ವಾಮಿ, ಶಾಲಾ ಶಿಕ್ಷಣ ಇಲಾಖೆ ಶಿಕ್ಷಣಾಧಿಕಾರಿ ಸಿದ್ದಪ್ಪ, ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸೇರಿದಂತೆ ಜಿಲ್ಲೆಯ ಎಲ್ಲ ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಅಧ್ಯಕ್ಷರು, ಕಾರ್ಯದರ್ಶಿಗಳು, ಮುಖ್ಯ ಶಿಕ್ಷಕರು ಇದ್ದರು.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ

ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಚಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.

HAMPI TIMES VIJAYANAGARA


# ಕೂಡ್ಲಿಗಿ ಊರಮ್ಮ ದೇವಿ ಜಾತ್ರೆ : ಮದ್ಯ ಮಾರಾಟ ನಿಷೇಧ

■ **ಹಂಪಿ ಟೈಮ್ಸ್ ಹೊಸಪೇಟೆ**

ಕೂಡ್ಲಿಗಿ ಪಟ್ಟಣದಲ್ಲಿ ಶ್ರೀಊರಮ್ಮ ದೇವಿ ರಥೋತ್ಸವ ಮತ್ತು ಜಾತ್ರೆ ಪ್ರಯುಕ್ತ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಮದ್ಯ ಮಾರಾಟ ನಿಷೇಧಿಸಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಆದೇಶ ಹೊರಡಿಸಿದ್ದಾರೆ.

ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 21 ರ ಅನ್ವಯ ಮೇ 22 ರ ಬೆಳಿಗ್ಗೆ 6 ಗಂಟೆಯಿಂದ ಮೇ.23 ರ ಬೆಳಿಗ್ಗೆ 6 ಗಂಟೆವರೆಗೆ ಕೂಡ್ಲಿಗಿ ಪಟ್ಟಣದಲ್ಲಿ ಮದ್ಯಾಪಾನ ಮಾರಾಟ ಮತ್ತು ಸಾಗಾಣಿಕೆ ಮಾಡದಂತೆ ಹಾಗೂ ಮದ್ಯದಂಗಡಿಯನ್ನು ಮುಚ್ಚುವಂತೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ತೋಟಗಾರಿಕೆ ಸಹಾಯ ಧನಕ್ಕಾಗಿ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

2025–26ನೇ ಸಾಲಿನ ಹೂವಿನಹಡಗಲಿ ತಾಲೂಕಿನ ತೋಟಗಾರಿಕೆ ಇಲಾಖೆ ವತಿಯಿಂದ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ, ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಹನಿ ನೀರಾವರಿ), ಯಂತ್ರೋಪಕರಣ ಯೋಜನೆಗಳಡಿಯಲ್ಲಿ ಅರ್ಹ ಫಲಾನುಭವಿಗಳ ಆಯ್ಕೆಗಾಗಿ ಅರ್ಜಿ ಆಹ್ವಾನಿಸಲಾಗಿದೆ.

> **ಪರಿಶಿಷ್ಟ ಜಾತಿ ಶೇ.17, ಪರಿಶಿಷ್ಟ ಪಂಗಡ ಶೇ.7, ಮಹಿಳೆ ಶೇ.33, ಅಲ್ಪಸಂಖ್ಯಾತರು ಶೇ.5 ಹಾಗೂ ಅಂಗವಿಕಲರಿಗೆ ಶೇ.3 ರಂತೆ ಮೀಸಲಾತಿಗೆ ಆದ್ಯತೆ**

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಹಣ್ಣು(ಬಾಳೆ), ಹೈಬ್ರಿಡ್ ತರಕಾರಿಗಳ ಪ್ರದೇಶ ವಿಸ್ತರಣೆ ಮತ್ತು ಹೂವು ಪ್ರದೇಶ ವಿಸ್ತರಣೆ (ಕತ್ತರಿಸಿದ ಹೂ, ಗಡ್ಡೆ ಜಾತಿಯ ಹೂ, ಬಿಡಿ ಹೂ) ವೈಯಕ್ತಿಕ ಕೃಷಿಹೊಂಡ, ಸಣ್ಣ ಟ್ರಾಕ್ಟರ್, ಪಾಲಿಹೌಸ್, ನೆರಳು ಪರದೆ, ಈರುಳ್ಳಿ ಶೇಖರಣಾ ಘಟಕ, ಎರೆಹುಳು ಘಟಕ, ಜೇನುಪೆಟ್ಟಿಗೆ, ಪ್ಲಾಸ್ಟಿಕ್ ಮಲ್ಚಿಂಗ್, ಮಾವು ಪುನಃಶ್ಚೇತನ, ಘಟಕಗಳಿಗೆ ರೈತರಿಗೆ ಸಹಾಯ ಧನ ಸೇರಿದಂತೆ ಹನಿ ನೀರಾವರಿ ಯೋಜನೆಯಡಿ ಹಣ್ಣು ಮತ್ತು ತರಕಾರಿ ಬೆಳೆಗಳಿಗೆ ಹನಿ ನೀರಾವರಿ ಸಹಾಯಧನ ಸೌಲಭ್ಯ ಇರುತ್ತದೆ. ಯಂತ್ರೋಪಕರಣಗಳ ಯೋಜನೆಯಡಿ ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದ ಯಂತ್ರೋಪಕರಣಗಳಿಗೆ ಸಹಾಯಧನ ಸೌಲಭ್ಯ ಇರುತ್ತದೆ. ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸುವ ರೈತರು ಸ್ವಂತ ಜಮೀನು ಮತ್ತು ನೀರಾವರಿ ಸೌಲಭ್ಯ ಹೊಂದಿರಬೇಕು. ಆಧಾರ ಕಾರ್ಡ್, ಮತದಾರರ ಗುರುತಿನ ಚೀಟಿ, ಗಣಕೀಕೃತ ಬೆಳೆ ದೃಢೀಕರಣ ಪತ್ರ ಹಾಗೂ ರಾಷ್ಟ್ರೀಕೃತ ಬ್ಯಾಂಕ್ ಗಳ ಪಾಸ್ ಬುಕ್ ಗಳನ್ನು ಹೊಂದಿರಬೇಕು. (ಎಫ್‌ಐಡಿ ಸಂಖ್ಯೆ ಹೊಂದಿರಬೇಕು) ಪರಿಶಿಷ್ಟ ಜಾತಿ ಶೇ.17, ಪರಿಶಿಷ್ಟ ಪಂಗಡ ಶೇ.7, ಮಹಿಳೆ ಶೇ.33, ಅಲ್ಪಸಂಖ್ಯಾತರು ಶೇ.5 ಹಾಗೂ ಅಂಗವಿಕಲರಿಗೆ ಶೇ.3 ರಂತೆ ಮೀಸಲಾತಿಗೆ ಆದ್ಯತೆ ನೀಡಲಾಗುವುದು. ಅರ್ಜಿಗಳನ್ನು ಹಡಗಲಿ, ಇಟ್ಟಿಗಿ ಮತ್ತು ಹಿರೇಹಡಗಲಿ ಸಹಾಯಕ ತೋಟಗಾರಿಕೆ ಅಧಿಕಾರಿ, ರೈತ ಸಂಪರ್ಕ ಕೇಂದ್ರಗಳನ್ನು ಸಂಪರ್ಕಿಸಬೇಕು. ಭರ್ತಿ ಮಾಡಿದ ಅರ್ಜಿಯನ್ನು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿಗೆ ಸಲ್ಲಿಸಬೇಕು ಎಂದು ಹೂವಿನಹಡಗಲಿ ತಾಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಿಲಾಯುಗದ ಬೇಟೆಗಾರರ ವರ್ಣಚಿತ್ರಗಳ ಶೋಧನೆ

■ **ಹಂಪಿ ಟೈಮ್ಸ್ ಕೂಡ್ಲಿಗಿ**


ಶಿಕ್ಷಕರು ಹಾಗೂ ಸಾಹಿತಿಗಳಾದ ಶೇಖರಯ್ಯ ಟಿ.ಎಚ್. ಎಂ ಇವರು ಗ್ರಾಮಸ್ಥರಾದ ನಾಗರಾಜ, ಪಾಲಯ್ಯ, ರಾಮಮೂರ್ತಿ ಮತ್ತು ನಂದೀಶ ಇವರ ಸಹಕಾರದೊಂದಿಗೆ ತಾಲೂಕಿನ ಗೆದ್ದಲಗಟ್ಟೆ ಬೆಟ್ಟದ ಮೇಲಿನ ಬೃಹತ್ ಗ್ರಾನೈಟ್ ಶಿಲೆಯ ಚಾಚು ಬಂಡೆಯೊಂದರ ಒಳಭಾಗದಲ್ಲಿ ಚಿತ್ರಿಸಿರುವ ವರ್ಣಚಿತ್ರಗಳನ್ನು ಶೋಧಿಸಿದ್ದಾರೆ. ಬೆಟ್ಟದ ಮೇಲೆ ಸಮತಟ್ಟಾಗಿರುವ ಜಾಗದಲ್ಲಿರುವ ಬೃಹದಾಕಾರದ ಬಂಡೆಯೊಂದರ ಒಳಭಾಗದಲ್ಲಿ ಕೆಂಪು ವರ್ಣದಿಂದ ಉದ್ದನೇ ಕೋಡುಗಳಿರುವ ಆಕಳಿನ ಪಾರ್ಶ್ವಭಾಗ, ಬಿಲ್ಲು ಬಾಣಗಳನ್ನು ಕೈಯಲ್ಲಿ ಹಿಡಿದಿರುವ ಬೇಟೆಗಾರರ ಚಿತ್ರ, ಬೇಟೆಯಲ್ಲಿ ಬಂಧಿಸಿರುವ ಪ್ರಾಣಿ ಚಿತ್ರ, ಉದ್ದನೆಯ ಬಾಲ ಮತ್ತು ಕಾಲುಗಳನ್ನು ಹೊಂದಿರುವ ಪ್ರಾಣಿಯ ಅಥವಾ ಪಕ್ಷಿಯ ಚಿತ್ರ (ಅಸ್ಪಷ್ಟ), ಮೀನಿನ ಚಿತ್ರ ಕಾಣಬಹುದು. ಇನ್ನೂ ಕೆಲವೊಂದು ಚಿತ್ರಗಳು ಗುರಿತಿಸಲು ಸಾಧ್ಯವಾಗದಷ್ಟು ಅಸ್ಪಷ್ಟವಾಗಿವೆ.

ಈ ಚಿತ್ರಗಳ ಬಗ್ಗೆ ಶೇಖರಯ್ಯ ಇವರು,ಇತಿಹಾಸ ಮತ್ತು ಪುರಾತತ್ವ ತಜ್ಞರಾದ ಡಾ. ಆರ್.ಎಂ. ಷಡಾಕ್ಷರಯ್ಯ ಇವರ ಗಮನಕ್ಕೆ ತಂದಾಗ,ಅವರು ನೀಡಿದ ಮಾಹಿತಿ ಹೀಗಿದೆ.

ಸದರಿ ಚಿತ್ರಗಳು ಕ್ರಿ.ಪೂ.1000 ದಿಂದ ಕ್ರಿ. ಪೂ. 200 ರ ಕಾಲಘಟ್ಟದ ಕಬ್ಬಿಣದ ಬೃಹತ್ ಶಿಲಾ ಸಂಸ್ಕೃತಿಯ ಕಾಲದಲ್ಲಿ ಚಿತ್ರಿತವಾಗಿವೆ. ಈ ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಲಾಗಿ, ಚಿತ್ರಗಳು ಏಕಕಾಲಕ್ಕೆ ಚಿತ್ರಿಸಿದವುಗಳಾದರೂ ಸಹಿತ ಅವುಗಳನ್ನು 1) ಬೇಟೆಗಾರರ ಚಿತ್ರ.2) ಇನ್ನುಳಿದ ರೇಖಾಚಿತ್ರಗಳು ಎಂದು ಎರಡು ಹಂತಗಳಲ್ಲಿ ರಚಿಸಿರಬಹುದೆಂದು ತರ್ಕಿಸಿದರು. ಸದರಿ ಬೆಟ್ಟದಲ್ಲಿ ಇನ್ನೂ ಹೆಚ್ಚಿನ



ಅನ್ವೇಷಣೆ ಕೈಗೊಂಡರೆ ಅನೇಕ ಬಂಡೆ ಚಿತ್ರಗಳು ಸಿಗುವ ಸಾಧ್ಯತೆ ಇದೆ ಎಂದು ತಿಳಿಸಿದರು. ಇದೇ ಬಂಡೆಯ ಸಮೀಪದಲ್ಲಿ ಕಂಡು



ಬಂದ ಅನೇಕ ಗಡಿಗೆ ಮಡಿಕೆಗಳ ಅವಶೇಷಗಳ ಬಗ್ಗೆ ಅವರ ಗಮನಕ್ಕೆ ತರಲಾಗಿ, ಈ ಗಡಿಗೆ ಮಡಿಕೆಗಳ ಅವಶೇಷಗಳು >> 3

## ಬೆಳಕಿನ ಹಾದಿ

# ಸಾಧನೆ

■ ಜಯಶ್ರೀ.ಎಂ.ಕರ್ಜಗಿ, ಹುಬ್ಬಳ್ಳಿ



ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ ಫಲಿತಾಂಶಗಳು ಹೊರಬಿದ್ದಿದ್ದವು. ರಾಮಗಿರಿಯಲ್ಲಿನ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದರು. ಆ ಊರಿನ ಕೆಲ ಯುವಕರು ಸೇರಿಕೊಂಡು ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಬೇಕೆಂದು ನಿರ್ಧರಿಸಿ ಕಾರ್ಯಕ್ರಮ ಆಯೋಜಿಸಿದರು. ಕಾರ್ಯಕ್ರಮಕ್ಕೆ ಒಬ್ಬ ಉಪನ್ಯಾಸಕರನ್ನು ಕರೆದಿದ್ದರು. ಆ ಉಪನ್ಯಾಸಕರು ಮಾಡಿದ ಭಾಷಣ ಹೀಗಿತ್ತು.

ಇಂದಿನ ಕಾರ್ಯಕ್ರಮದ ಆಯೋಜಕರಿಗೂ ಹಾಗೂ ಪ್ರತಿಭಾ ಪುರಸ್ಕೃತರಿಗೂ ನನ್ನ ನಮಸ್ಕಾರಗಳು. ಇದೊಂದು ಉತ್ತಮ ಕಾರ್ಯಕ್ರಮ. ಸಾಧನೆ ಹೇಗಿರಬೇಕೆಂದು ಒಂದು ಸಣ್ಣ ಕಥೆಯ ಮೂಲಕ ನಾನು ಉಪನ್ಯಾಸ ಮಾಡುವೆ. ಅಲೋಕ ಮಧ್ಯಮ ವರ್ಗದ ಕುಟುಂಬಕ್ಕೆ ಸೇರಿದ ಯುವಕ. ಅವನಿಗೆ ಒಬ್ಬ ಹಿರಿಯ ಸಹೋದರಿ ಇದ್ದಳು. ತಂದೆ ಸರಕಾರಿ ನೌಕರ. ಸಂಸಾರ ಸುಖ ಸಂತೋಷದಿಂದ ಇರಬೇಕಿತ್ತು. ಆದರೆ ಅಲೋಕನ ತಂದೆ ಇಸ್ಪೀಟು, ಜೂಜು, ಕುಡಿತದ ಚಟಗಳ ದಾಸನಾಗಿ ಸಂಬಳವನ್ನು ಮನೆಗೆ ಕೊಡುತ್ತಿರಲಿಲ್ಲ. ತನ್ನ ದುಶ್ಚಟಗಳಿಗಾಗಿ ತುಂಬಾ ಸಾಲ ಮಾಡಿಕೊಂಡಿದ್ದ. ಅಲೋಕ ಅನಿವಾರ್ಯವಾಗಿ ಓದನ್ನು ಮೊಟಕುಗೊಳಿಸಿ, ಕೆಲಸಕ್ಕೆ ಹೋಗಲಾರಂಭಿಸಿದ. ತನ್ನ ಸಹೋದರಿಯನ್ನು ಓದಿಸಿದ. ಮನೆಯ ಎಲ್ಲಾ ಜವಾಬ್ದಾರಿ ಹೊತ್ತುಕೊಂಡ ಹಿರಿಯರಿಂದ ಬಂದ ಅಲ್ಪ ಜಮೀನನ್ನು ಮಾರಾಟ ಮಾಡಿ ತಂದೆ ಮಾಡಿದ ಸಾಲವನ್ನು ತೀರಿಸಿದ. ಕೈಯಲ್ಲಿ ಬಿಡಿಗಾಸು ಉಳಿದಿತ್ತು. ಅಷ್ಟೇ ಹಣದಲ್ಲಿ ಮೊಬೈಲ್ ಅಂಗಡಿಯನ್ನು ತೆರೆದನು.

ಸ್ವಲ್ಪ ದಿನಗಳ ನಂತರ ಪ್ರತಿಷ್ಠಿತ ಗ್ರಾಹಕರ ಪರಿಚಯ ಮತ್ತು ಸಂಪರ್ಕದಿಂದ ರಿಯಲ್ ಎಸ್ಟೇಟ್ ಏಜೆಂಟ್ ಆಗಿ ಕೆಲಸ ಶುರುಮಾಡಿದ. ರಿಯಲ್ ಎಸ್ಟೇಟ್ ಕೆಲಸದಲ್ಲಿ ಅವನು ತೋರಿಸಿದ ಶ್ರದ್ಧೆ ಹಾಗೂ ಪ್ರಾಮಾಣಿಕತೆ ಅವನ ಕೈ ಹಿಡಿದಿತ್ತು. ನಿಧಾನವಾಗಿ ಬೆಳೆದು ತನ್ನದೇ ಆದ ಸ್ವಂತ ರಿಯಲ್ ಎಸ್ಟೇಟ್ ಕಂಪನಿ ಕಟ್ಟಿದ. ಹತ್ತಾರು ಕುಟುಂಬಗಳಿಗೆ ಕೆಲಸ ಕೊಟ್ಟ.

ಕೋವಿಡ್ ಸಮಯದಲ್ಲಿ ಅವನ ಅಕ್ಕ-ಭಾವ ಇಬ್ಬರೂ ಮರಣ ಹೊಂದಿದರು. ಅವರ ಇಬ್ಬರು ಗಂಡು ಮಕ್ಕಳಿಗೆ ಆಶ್ರಯ ಕೊಟ್ಟು ಒಳ್ಳೆಯ ವಿದ್ಯಾಭ್ಯಾಸ ಕೊಡಿಸಿ ಅವರ ಜೀವನ ಹಸನಾಗುವಂತೆ ಮಾಡಿದ. ಜೀವನದಲ್ಲಿ ನಡೆದ ಕಹಿ ಘಟನೆಗಳು, ನೋವುಗಳು, ಅವಮಾನಗಳಿಂದ ನಿರಾಶೆಯಾಗದೇ ಅವುಗಳನ್ನೇ ತನ್ನ ಸಾಧನೆಯ ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ಸಾಧನೆ ಮಾಡಿದ. ಅಲೋಕ ಯುವಕರಿಗೆ ಪ್ರೇರಣೆ ಮತ್ತು ಸ್ಫೂರ್ತಿದಾಯಕನಾದ. ಓದಿ ಪದವಿ ಪಡೆದು ಜೀವನೋಪಾಯಕ್ಕಾಗಿ ನೌಕರಿ ಪಡೆದುಕೊಳ್ಳುವುದು ಒಂದು ಸಾಧನೆಯಲ್ಲ. ನಮ್ಮ ಸಾಧನೆಗಳು ಹಲವರಿಗೆ ಸ್ಫೂರ್ತಿದಾಯಕವಾಗಬೇಕು, ಪ್ರೇರಣೆಯಾಗಬೇಕು. ಎಲ್ಲರಂತೆ ಅಲೋಕನೂ ಪದವಿ ಪಡೆದುಕೊಂಡು ನೌಕರಿ ಮಾಡುತ್ತಿದ್ದರೆ, ಸಾಮಾನ್ಯ ಮನುಷ್ಯನಾಗಿರುತ್ತಿದ್ದ. ಕನ್ನಡದ ಮೇರು ನಟ ಡಾಕ್ಟರ್ ರಾಜಕುಮಾರರ ಬಂಗಾರದ ಮನುಷ್ಯ ಚಲನಚಿತ್ರ ಹಲವರಿಗೆ ಪ್ರೇರಣೆಯಾಗಿ ಕೃಷಿಯನ್ನೇ ತಮ್ಮ ಬದುಕಾಗಿಸಿಕೊಂಡರು. ಕೈಕೆಸರಾದರೆ ಬಾಯಿ ಮೊಸರು ಎನ್ನುವ ಗಾದೆ ಮಾತಿನಂತೆ ಕಷ್ಟಪಟ್ಟರೆ ಸುಖ ಸಿಕ್ಕೆ ಸಿಗುತ್ತದೆ. ಅಲೋಕನ ಜೀವನಗಾಥೆ ಯುವಕರಿಗೆ ಪ್ರೇರಣೆಯಾಗಲಿ. ನಿಮ್ಮೆಲ್ಲರಿಗೂ ಒಳಿತಾಗಲಿ ಎಂದು ತಮ್ಮ ಮಾತನ್ನು ಮುಗಿಸಿದರು. ಇದನ್ನು ಕೇಳಿದ ಅಲ್ಲಿದ್ದ ಎಲ್ಲರೂ ಚಪ್ಪಾಳೆ ತಟ್ಟುತ್ತಾ ತಾವೂ ಅಲೋಕನಂತೆ ಸಾಧನೆ ಮಾಡಬೇಕೆಂದು ನಿರ್ಧರಿಸಿದರು. ನಿಮ್ಮ ಸಾಧನೆ ಹೇಗಿರಲಿದೆ? ತಿಳಿಸುವಿರಾ?

## ನಿಮ್ಮ ಬೆಂಬಲವೇ ನಮ್ಮ ಬಲ

ಪತ್ರಿಕೆಗಳು ತಮ್ಮ ಕಾರ್ಯ ನೈಪುಣ್ಯತೆಯನ್ನು ಅಭಿವೃದ್ಧಿಪಡಿಸಬೇಕಾದರೆ, ಓದುಗರೂ ಸಹ ಚಂದಾದಾರಿಕೆ, ಸ್ವಯಂಪ್ರೇರಿತವಾಗಿ ಜಾಹೀರಾತು ನೀಡಿ ಬೆಂಬಲಿಸಿ ಇತರರಿಗೂ ಪರಿಚಯಿಸಿ. ಮಕ್ಕಳ ಶೈಕ್ಷಣಿಕ ಪ್ರಗತಿಗೆ ಕೈಜೋಡಿಸಬೇಕಿದೆ. ನಿಮ್ಮ ಸಹಕಾರ ಮತ್ತಷ್ಟು ಉತ್ತಮ ಕಾರ್ಯಗಳಿಗೆ ಸ್ಫೂರ್ತಿ. ಸಸಿಗೆ ನೀರೆರೆಯದಿದ್ದರೆ ಹೂವು ನಿರೀಕ್ಷಿಸಲಾಗದು. ಪತ್ರಿಕೆಗೆ ಬೆಂಬಲವಿಲ್ಲದೆ ಸೇವೆಯ ನಿರಂತರತೆ ಕನಸು ಕಾಣಲಾಗದು! ನಿಮ್ಮ ಬೆಂಬಲವೇ ನಮ್ಮ ಕಾಯಕಕ್ಕೆ ಬಲ.

**ಹಂಪಿ ಟೈಮ್ಸ್, ಹೊಸಪೇಟೆ : ಮೊ: 9448633038**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

-: ಸಂಪಾದಕರು :-

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಹೆತ್ತವರ ಪ್ರೀತಿಸಲು ಸಾಯುವ ತನಕ ಕಾಯಬಾರದು



ತಂದೆ ತಾಯಿಯರ ಮಹತ್ವ ಸರಿಯಾಗಿ ಅರಿಯದವನೆ ಅನಾಥ ಏಕೆಂದರೆ ತಾಯಿ ಇರೋವರೆಗೂ ಹಸಿವು ತಿಳಿಯೋದಿಲ್ಲವಂತೆ ಮತ್ತು ತಂದೆ ಇರೋವರೆಗೂ ಜವಾಬ್ದರಿ ಬರೋದಿಲ್ಲವಂತೆ ಈ ರೀತಿ ನಮ್ಮ ತಂದೆ ತಾಯಿ ಇರೋವಾಗ ನಾವು ನಮ್ಮದೇ ಆದ ಉಡಾಫೆ ಬೇಜವಾಬ್ದಾರಿತನ ತೋರುತ್ತೇವೆ ಕೊನೆಗೆ ಅವರು ಇಲ್ಲವಾದಾಗ ಅವರ ಅನುಪಸ್ಥಿತಿಯಿಂದ ಸದಾ ಕನವರಿಸಿ ಕೊರಗುತ್ತೇವೆ ಈ ರೀತಿ ಬೇಜವಾಬ್ದಾರಿ ತೋರದೇ ಅವರು ಇರುವಾಗಲೇ ಅವರ ಮೇಲೆ ನಮಗಿರುವ ಪ್ರೀತಿಯನ್ನು ಕಾಳಜಿಯನ್ನು ತೋರಿಸಬೇಕು. ಈ ಸಂದರ್ಭದಲ್ಲಿ 2006ನೇ ಇಸವಿಯಲ್ಲಿ "ಓ ಮನಸೇ" ಎಂಬ ಪಾಕ್ಷಿಕದಲ್ಲಿ, ಓದಿದ ಒಂದು ಲೇಖನದ ಬಗ್ಗೆ ನಿಮ್ಮೊಂದಿಗೆ ಹಂಚಿಕೊಳ್ಳಲೇಬೇಕು ಅದು ನನಗೆ ತುಂಬಾ ಇಷ್ಟ ಆಗಿತ್ತು ಆದ್ದರಿಂದಲೇ ಆ ಪ್ರತಿಯನ್ನು ಇದುವರೆಗೂ ನನ್ನ ಬಳಿ ಅಚ್ಚಳಿಯದಂತೆ ಜತನದಲ್ಲಿ ಕಾಪಾಡಿಕೊಂಡು ಬಂದಿದ್ದೇನೆ ಏಕೆಂದರೆ ಆ ಲೇಖನ ಎಲ್ಲಾ ಕಾಲಕ್ಕೂ ಸಲ್ಲುವ ಶ್ರೇಷ್ಠ ಲೇಖನ ಎಂದೇ ಹೇಳಬಹುದು. ಬದುಕಿನ ಜಂಜಾಟದಲ್ಲಿ ನಾವು ನಮ್ಮ ಹೆತ್ತವರನ್ನು ಅರಿವಿಲ್ಲದಂತೆ ಕಡೆಗಣಿಸಿ ಬಿಡುತ್ತೇವೆ ಅವರು ನಮ್ಮೊಂದಿಗೆ ಇರುವಾಗಲೂ ಎಷ್ಟೋ ಬಾರಿ ಅವರಿಗೆ ತೋರಬೇಕಾದ ಪ್ರೀತಿಯನ್ನು ಕಾಳಜಿಯನ್ನು ತೋರಿಸುವುದಿಲ್ಲ ಅದೇನೋ ಒಂಥರಾ ನಮ್ಮ ಅಪ್ಪ ಅಮ್ಮ ತಾನೇ ಇಲ್ಲೇ ಇರ್ತಾರಲ್ಲ ಬಿಡು ಅವರೆಲ್ಲಿ ಹೋಗುತ್ತಾರೆ ಎಂಬ ನಮ್ಮ ಭ್ರಮೆಯಿಂದ ನಮಗೆ ತಿಳಿಯದ ಹಾಗೆ ನಾವೇ ಅವರನ್ನ ಕಡೆಗಣಿಸುತ್ತಾ ಹೋಗುತ್ತೇವೆ ಆದರೆ ಅವರು ಇಲ್ಲದ ಮೇಲೆ ಅವರ ಅನುಪಸ್ಥಿತಿ ಮಾತ್ರ ನಮಗೆ ತುಂಬಾ ದುಃಖ ತರಿಸುತ್ತೆ ಅದಕ್ಕೆ ಆ ರೀತಿ ಆಗಬಾರದು ಎಂದು ಆ ಲೇಖನದ ಬಗ್ಗೆ ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ.

ತನ್ನ ತಾಯಿಗೆ ಮಣ್ಣುಕೊಟ್ಟು ಬಂದ ಒಬ್ಬ ಮಗ ಬರೆದುಕೊಂಡ ಒಂದು ಇಮೇಲ್ ಅಂತರ್ಜಾಲದಲ್ಲಿ ಹರಿದಾಡಿ ಬಂದಿದ್ದನ್ನು ನೋಡಿ 'ಅಜಿತ್' ಎಂಬುವವರು ಬರೆದ "ಸಾಯುವ ತನಕ ಕಾಯ ಬೇಡ" ಎಂಬ ಲೇಖನದಲ್ಲಿನ ಆ ಇಮೇಲ್ ನ ಭಾಗವನ್ನು ಯಥಾ ವತ್ತಾಗಿ ನಿಮ್ಮ ಮುಂದೆ ಇಟ್ಟಿದ್ದೇನೆ ದಯವಿಟ್ಟು ಇದನ್ನು ಓದಿ;

ಜಗತ್ತಿನ ತುಂಬ ಇರುವವರೆಲ್ಲ ನನ್ನಂತಹ ಮಕ್ಕಳೇ ನನಗೊಬ್ಬಳು ಅದ್ಭುತವಾದ ತಾಯಿ ಇದ್ದಳು. ನಾನು ಹುಟ್ಟಿದಾಗಿನಿಂದ ಇಲ್ಲಿಯ ತನಕ ನಾನೇ ಅವಳ ಬದುಕಿನ ಕೇಂದ್ರವಾಗಿದ್ದೆ ನನಗೆ ದುಃಖವಾದಾಗ



ತಾನೂ ದುಃಖಪಟ್ಟಳು ನನಗೆ ಸಂತೋಷವಾದಾಗ ತಾನೂ ಸಂತೋಷಪಟ್ಟಳು ನಾನು ಕುಸಿದು ಕುಳಿತಾಗಲೆಲ್ಲಾ ಧೈರ್ಯ ಹೇಳಿದಳು. ನಾನು ಯಾರ್ಂಕ್ ಪಡೆದೆ-ನನಗಿಂತ ಹೆಚ್ಚು ಆಕೆಯೇ ನಲಿದಳು ನಾನು ಹನಿಮೂನ್‌ಗೆ ಹೋದೆ-ಆಕೆ ಮನೆ ನೋಡಿ ಕೊಂಡಳು. ನಾವು ಗಂಡ-ಹೆಂಡ್ತಿ ನೌಕರಿಗೆ ಹೋದರೆ ಮಕ್ಕಳನ್ನಾಡಿ ಸಿದಳು ಆಕೆಯ ಮಡಿಲಲ್ಲೇ ದೊಡ್ಡವಾದವು ಮಕ್ಕಳು. ಅಂಥ ತಾಯಿ ಇವತ್ತು ತೀರಿಹೋದಳು. ಮಣ್ಣು ಕೊಟ್ಟು ಬಂದು, ಅವಳು ಮಲಗುತ್ತಿದ್ದ ಹಾಸಿಗೆ ತೆಗೆದಿಡುತ್ತಿದ್ದೆ. ಆಗ ದಿಂಬಿನ ಕೆಳಗೆ ಸಿಕ್ಕಿತು ಈ ಪತ್ರ. ಹೌದು, ಅಮ್ಮನೇ ಬರೆದಿದ್ದಳು ನನಗೇ ಬರೆದಿದ್ದಳು ಆದರೆ ಕೊಟ್ಟಿರಲಿಲ್ಲ. ಪತ್ರ ಓದಲು ಪ್ರಾರಂಭಿಸುತ್ತಿದ್ದಂತೆಯೇ ಕಣ್ಣು ಮಂಜಾದವು. ಅಕ್ಷರಗಳು ಮಸುಕು-ಮಸುಕು,

"ಮಗನೇ. ಇನ್ನೇನು ಬಿದ್ದು ಹೋಗೋ ಮರ ಇದು. ನನ್ನನ್ನು ನೀನು ನಿಜವಾಗಲೂ ಇಷ್ಟಪಡೋದಾದರೆ, ನನ್ನ ಮೇಲೆ ಮಮಕಾರ ಇದ್ದರೆ ಅದೆಲ್ಲವನ್ನೂ ಈಗಲೇ ತೋರಿಸಿ ಬಿಡು ನಾನು ಸಾಯೋತನಕ ಕಾಯಬೇಡ ನನಗೆ ಗೊತ್ತು, ನಾನು ಸತ್ತಾಗ ನೀನು ತುಂಬಾ ಅಳ್ತೀಯಾ. ನನ್ನ ಶ್ರಾದ್ಧ ಮಾಡಿ ಬ್ರಾಹ್ಮಣರಿಗೆ ಹೊಟ್ಟೆ ತುಂಬಾ ಊಟ ಹಾಕ್ತೀಯಾ ನನ್ನದೊಂದು ದೊಡ್ಡ ಫೋಟೋ ಅದಕ್ಕೆ ಬಂಗಾರ ಬಣ್ಣದ ಫ್ರೇಮು, ಗಂಧದ ಮಾಲೆ ಹಾಕಿಸಿ ಬಂದವರೆಲ್ಲರಿಗೂ ಕಾಣಿಸುವಂತೆ ಗೋಡೆಗೆ ತೂಗು ಹಾಕ್ತೀಯಾ ನನಗೊಂದು ದೊಡ್ಡ ಸಮಾಧಿ ಕಟ್ಟಿ ಅಮೃತ ಶಿಲೆಯ ಮೇಲೆ ನನ್ನ ಹೆಸರು ಕೆತ್ತಿಸಿ ಹಾಕ್ತೀಯಾ, ಬಂದವರೆಲ್ಲರೆದುರು ನನ್ನದೇ ಗುಣಗಾನ, ಅಮ್ಮ ಎಷ್ಟು ಒಳ್ಳೆಯವ್ಳು ಗೊತ್ತಾ?... ಏನುಪಯೋಗ ಮಗನೇ? ಅಷ್ಟೊತ್ತಿಗಾಗಲೇ ನಮ್ಮಿಬ್ಬರ ನಡುವೆ ಮರಣದ ಮಹಾಗೋಡೆ. ಅದಕ್ಕೇ ಹೇಳಿದ್ದು, ನನ್ನ ಮೇಲೆ ಪ್ರೀತಿ ಇದ್ದರೆ ಈಗಲೇ ತೋರಿಸಿಬಿಡು. ಸ್ವಲ್ಪಾನೇ ಆದ್ರೂ ಪರವಾಗಿಲ್ಲ. ಸಾಯೋತನಕ ಖುಷಿ ಪಡಲು ನನಗೆ ಅದಕ್ಕಿಂತ ಹೆಚ್ಚಿಗೆ ಏನು ಬೇಕು? ಮಗನೇ, ದಯವಿಟ್ಟು ನಾನು ಸಾಯೋ ತನಕ ಕಾಯಬೇಡ".

ಇಷ್ಟು ಓದುವುದರೊಳಗಾಗಿ ನನ್ನ ದುಃಖ ಉಮ್ಮಳಿಸಿ ಬಂದಿತ್ತು. ನಾನು ಅಮ್ಮನನ್ನು ತುಂಬ ಇಷ್ಟ ಪಡ್ತಿದ್ದೆ, ಆದರೆ ಯಾವತ್ತೂ ಹೇಳಿಕೊಳ್ಳಲಿಲ್ಲ ಪ್ರೀತಿಯಿಂದ ಜೊತೆಗೆ ಕುಳಿತು ಮಾತನಾಡಲಿಲ್ಲ. ನಾವೆಲ್ಲರೂ ಸಿನಿಮಾಕ್ಕೆ ಹೋದ್ವಿ, ಆಕೇನಾ ಸಂಜೆ ಪಾರ್ಕಿಗೋ ದೇವಸ್ಥಾನಕ್ಕೋ ಹೋಗಿ ಬಾ ಅಂದ್ವಿ. ಔಷಧಿ ಕೊಡೋದನ್ನೇ ಪ್ರೀತಿ ಅಂದುಕೊಂಡೆ ನಾನು ಅಮ್ಮ ಹಾಸಿಗೆ ಹಿಡಿದಾಗ ನಾನ್ಯಾವತ್ತೂ ಹೋಗಿ ತಲೆ ಸವರಿ ಹೇಗಿದ್ದೀ ಅಂತ ಕೇಳಲೇ ಇಲ್ಲ. ಇವತ್ತು ಅಮ್ಮ ಇಲ್ಲ, ಆಕೆ ನನ್ನ ಪಾಲಿನ ಏನಾಗಿದ್ದಳು ಎಂಬುದನ್ನು ನಾನ್ಯಾವತ್ತೂ ಹೇಳಿ ಕೊಳ್ಳಲೇ ಇಲ್ಲ. ಜಗತ್ತಿನ ತುಂಬ ನನ್ನಂತಹ ಮಕ್ಕಳೇ.... ಅಮ್ಮನ ಮೇಲಿನ ಪ್ರೀತಿಯನ್ನ ತೋರಿಸಲು ಆಕೆ ಸಾಯುವ ತನಕ ಕಾಯುವವರು.


ಈ ಲೇಖನ ನಿಮ್ಮೊಂದಿಗೆ ಹಂಚಿಕೊಳ್ಳುವ ಉದ್ದೇಶ ಇಷ್ಟೇ ಕನಿಷ್ಠ ಇದನ್ನು ಓದಿಯಾದರೂ ಕೆಲವರು ಬದಲಾಗಿ ತಮ್ಮ ತಮ್ಮ ತಂದೆ-ತಾಯಿಯವರಿಗೆ ತಮ್ಮ ಸಮಯ ನೀಡಿ ಅವರ ಅನುಭವವನ್ನು ಅವರ ಪಕ್ಕದಲ್ಲಿ ಕುಳಿತು ಕೇಳಿ ಅವರ ಆಸೆಗಳನ್ನು ಒತ್ತಾಯ ಮಾಡಿ ಕೇಳಿ ತಿಳಿದು ಅದನ್ನು ಈಡೇರಿಸಿ ಏಕೆಂದರೆ ಅವರು ನನ್ನ ಕಂದನ ಹಣ ಎಲ್ಲಿ ಕರಗುವುದೋ ಎಂದು ತಮ್ಮ ಯಾವುದೇ ಆಸೆಯನ್ನು ಪೂರೈಸಲು ಹೇಳದೆ ಡಿಮ್ಯಾಂಡ್ ಮಾಡದೆ ಹಾಗೆ ಮನಸಲ್ಲಿ ಮರೆಮಾಚಿಕೊಂಡು ಕೊರಗುತ್ತಿರುತ್ತಾರೆ. ಆದರೆ ನಾವು ನಮ್ಮ ಜವಾಬ್ದಾರಿ ಅರಿತು ಅವರು ಸಾಯುವವರೆಗೂ ಕಾಯದೆ ಅವರು ಬದುಕಿರುವಾಗಲೇ ಅವರ ಮೇಲೆ ಇರುವ ನಮ್ಮ ಪ್ರೀತಿಯನ್ನು ಕಾಳಜಿಯನ್ನು ಯಥೇಚ್ಛವಾಗಿ ತೋರಿಸಬೇಕು ಮತ್ತು ಅವರ ಆಸೆಯನ್ನು ಪೂರೈಸಬೇಕು ಏಕೆಂದರೆ "ಕಾಲ ಮತ್ತು ಕಿರೀಟ ಯಾರನ್ನು ಕಾಯುವುದಿಲ್ಲ".


■ ವೆಂಕಟೇಶ ಹೆಚ್ ಚಿತ್ರದುರ್ಗ. (ನವ ದೆಹಲಿ)
7760023887

# ಪರಿಣಾಮಕಾರಿ ವಿಜ್ಞಾನ ಕಲಿಕೆಗೆ ಫೆಯ್ನಮನ್ ಬೋಧನಾ ವಿಧಾನ

ನೊಬೆಲ್ ಪ್ರಶಸ್ತಿ ವಿಜೇತ ಭೌತಶಾಸ್ತ್ರಜ್ಞ ಮತ್ತು 20ನೇ ಶತಮಾನದ ಅತ್ಯಂತ ಪ್ರತಿಭಾನ್ವಿತರಲ್ಲಿ ಒಬ್ಬರಾದ ರಿಚರ್ಡ್ ಫೆಯ್ನಮನ್, ಕ್ವಾಂಟಮ್ ಎಲೆಕ್ಟ್ರೋಡೈನಾಮಿಕ್ಸಗೆ ನೀಡಿದ ಅದ್ಭುತ ಕೊಡುಗೆಗಳಿಗೆ ಹೆಸರುವಾಸಿಯಾಗಿದ್ದರು. ಮಾತ್ರವಲ್ಲದೆ, ಸಂಕೀರ್ಣ ವಿಷಯಗಳನ್ನು ಸರಳ ಪದಗಳಲ್ಲಿ ವಿವರಿಸುವ ಅಸಾಧಾರಣ ಸಾಮರ್ಥ್ಯಕ್ಕೂ ಕೂಡ ಅವರು ಪ್ರಸಿದ್ಧರಾಗಿದ್ದರು. ಸಂಕೀರ್ಣ ವಿಷಯವನ್ನು ಅರ್ಥಮಾಡಿಕೊಳ್ಳುವುದು ಮತ್ತು ಬೋಧನೆಗೆ ಸಂಬಂಧಿಸಿದ ಅವರ ವಿಶಿಷ್ಟ ವಿಧಾನವು ಈಗ ಫೆಯ್ನಮನ್ ತಂತ್ರ ಎಂದು ವ್ಯಾಪಕವಾಗಿ ಕರೆಯಲ್ಪಡುವ ಒಂದು ವಿಧಾನವಾಗಿದೆ. ಹಾಗಾದರೆ ಫೆಯ್ನಮನ್ ಅವರ ಬೋಧನಾ ವಿಧಾನ ಯಾವ ಅಂಶಗಳನ್ನು ಒಳಗೊಂಡಿದೆ? ಆ ವಿಧಾನದಿಂದ ವಿಜ್ಞಾನದ ಪರಿಕಲ್ಪನೆಗಳನ್ನು ಅತೀ ಸುಲಭವಾಗಿ, ಮನದಟ್ಟಾಗುವಂತೆ ಬೋಧಿಸುವುದು ಹೇಗೆ ಎಂಬುದನ್ನು ನೋಡೋಣ. ಯಾವುದೇ ಒಂದು ಪರಿಕಲ್ಪನೆಯನ್ನು ಬೇರೆಯವರಿಗೆ ಸ್ಪಷ್ಟವಾಗಿ ವಿವರಿಸಲು ಸಾಧ್ಯವಾಗದಿದ್ದರೆ, ಆ ಪರಿಕಲ್ಪನೆಯನ್ನು ನಾವು ಸಾಕಷ್ಟು ಚೆನ್ನಾಗಿ ಅರ್ಥ ಮಾಡಿಕೊಂಡಿಲ್ಲವೆಂದೇ ಹೇಳಬಹುದು. ವಿಷಯದ ಸಂಕೀರ್ಣತೆಯನ್ನು ಸರಳತೆಗೆ ಭಾಷಾಂತರಿಸಲು ಫೆಯ್ನಮನ್ ಅವರ ಕಲಿಕಾ ವಿಧಾನ ಒತ್ತಿ ಹೇಳುತ್ತದೆ. ಆ ಮೂಲಕ ಫೆಯ್ನಮನ್ ತಂತ್ರವು ಯಾವುದೇ ವಿಷಯದ ಆಳವಾದ ಕಲಿಕೆ, ಸ್ಮರಣಶಕ್ತಿ ಮತ್ತು ಪಾಂಡಿತ್ಯವನ್ನು ಹೆಚ್ಚಿಸುತ್ತದೆ. ಮೂಲ ತತ್ವವೆಂದರೆ ವಿದ್ಯಾರ್ಥಿಗೆ ಸರಳ ಪದಗಳಲ್ಲಿ ಅಂದರೆ ಆಡು ಭಾಷೆಯಲ್ಲಿ ವಿಷಯವನ್ನು ವಿವರಿಸುವ ಮೂಲಕ ಕಲಿಕೆಯನ್ನು ಬಲಪಡಿಸುವುದು.

ಒಂದು ಪರಿಕಲ್ಪನೆಯನ್ನು ಆರಿಸಿ ಮತ್ತು ಅದನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿಕೊಂಡು ಅತೀ ಸರಳ ಪದಗಳಲ್ಲಿ ಬೋಧಿಸುವುದು (ನೈಜ ಅಥವಾ ಕಾಲ್ಪನಿಕ). ಜ್ಞಾನದ ಅಂತರವನ್ನು ಗುರುತಿಸುವುದು ಅಂದರೆ ಕಲಿಸಬೇಕಾದ ಪರಿಕಲ್ಪನೆಗೆ ಸಂಬಂಧಿಸಿದಂತೆ ಇನ್ನೂ ಯಾವ ಯಾವ ಅಂಶಗಳು ಮಗುವಿಗೆ ತಿಳಿದಿಲ್ಲ ಎಂಬುದನ್ನು ಗುರುಸಿಕೊಂಡು ಮೂಲ ಕಲಿಕಾ ವಸ್ತುವಿಗೆ ಹಿಂದಿರುಗು ವುದು. ಪ್ರಯೋಗಗಳು ಮತ್ತು ಸರಳ ಭಾಷೆಯನ್ನು ಬಳಸಿಕೊಂಡು ಮತ್ತೆ ಕಲಿಸ 'ಬೇಕಾದ ಪರಿಲಕ್ಪನೆಯನ್ನು ಪರಿಷ್ಕರಿ ಸುವುದು ಮತ್ತು ಸರಳ ಗೊಳಿಸುವುದು. ಮೌಖಿಕ ಕಂಠ ಪಾಠಕ್ಕಿಂತ ಭಿನ್ನವಾಗಿ, ಈ ತಂತ್ರವು ಮೇಲ್ಮಟ್ಟದ ಕಲಿಕೆಯ ಮೇಲೆ ನಿಜವಾದ ಗ್ರಹಿಕೆಯನ್ನು ಒತ್ತಿಹೇಳುತ್ತದೆ. ಇದು ವಿಜ್ಞಾನ ವಿಷಯದ ಯಾವುದೇ ತತ್ವ, ಐತಿಹಾಸಿಕ ಘಟನೆ, ಗಣಿತ ಪ್ರಮೇಯವೂ ಆಗಿರಬಹುದು. ವಿಷಯ ವನ್ನು ಆಳವಾಗಿ ಅಧ್ಯಯನ ಮಾಡಲು ಆದ್ಯತೆಯ ಮೂಲವಾಗಿ ಇವುಗಳಲ್ಲಿ (ಪುಸ್ತಕಗಳು, ಉಪನ್ಯಾಸಗಳು, ವೀಡಿಯೊಗಳು ಅಥವಾ ಲೇಖನಗಳು) ಯಾವುದನ್ನಾದರೂ ಬಳಸಬಹುದು. ಫೆಯ್ನಮನ್ ತಂತ್ರವು ಹಲವಾರು ಕಾರಣಗಳಿಗಾಗಿ ಪ್ರಬಲವಾಗಿದೆ. ಇದು ಯಾವುದೇ ಒಂದು ಹೊಸ ಪರಿಕಲ್ಪನೆಯನ್ನು ತಿಳಿದುಕೊಳ್ಳುವ ಪೂರ್ವದಲ್ಲಿ ಅದರ ಕುರಿತ ಪೂರ್ವ ಜ್ಞಾನವನ್ನು ಪರೀಕ್ಷಿಸುತ್ತದೆ: ಅಂದರೆ ಅನೇಕರು ಹೊಸ ವಿಷಯಗಳನ್ನು ಕಲಿಯುವಾಗ ಅದಕ್ಕೆ ಸಂಬಂಧಿಸಿದ ತಮ್ಮ ಪೂರ್ವ ಜ್ಞಾನವನ್ನು ಪರೀಕ್ಷಿಸಿಕೊಳ್ಳುವುದರಿಂದಲೇ ವಿಷಯದ ಬಗ್ಗೆ ಎಷ್ಟು ಜ್ಞಾನ ಹೊಂದಿದ್ದಾರೆ ಎಂಬುದನ್ನು ಗುರುತಿಸಬಹುದಾಗಿದೆ. ಈ ವಿಧಾನದ ಬೋಧನೆಯು ಜ್ಞಾಪಕ ಶಕ್ತಿಯನ್ನು ಪರಿಶೀಲಿಸುವ ಮೂಲಕ ವಿದ್ಯಾರ್ಥಿಯು ನಿಜವಾಗಿಯೂ ಅರ್ಥ ಮಾಡಿಕೊಳ್ಳದ್ದನ್ನು ಬಹಿರಂಗಪಡಿಸುತ್ತದೆ. ಈ ಬೋಧನೆಯು ಬಹು ಕಲಿಕೆಯ ಶೈಲಿಗಳನ್ನು ತೊಡಗಿಸಿಕೊಳ್ಳುತ್ತದೆ. ಇಲ್ಲಿ ಓದುವಿಕೆ(ದೃಶ್ಯ), ಬರವಣಿಗೆ ಅಥವಾ ಮಾತನಾಡುವಿಕೆ (ಮೌಖಿಕ) ಮತ್ತು ಕೆಲವೊಮ್ಮೆ ರೇಖಾ ಚಿತ್ರವನ್ನೂ ಕೂಡ ಬಳಸಲಾಗುತ್ತದೆ. ಇದು ಮೆದುಳಿನ ಹೆಚ್ಚಿನ ಪ್ರದೇಶಗಳನ್ನು ಸಕ್ರಿಯಗೊಳಿಸುತ್ತದೆ ಮತ್ತು ಸ್ಮರಣಾ ಶಕ್ತಿಯನ್ನೂ ಕೂಡ ಹೆಚ್ಚಿಸುತ್ತದೆ. ನಿಷ್ಕ್ರೀಯ ಟಿಪ್ಪಣಿ ತೆಗೆದುಕೊಳ್ಳುವಿಕೆಗಿಂತ ಭಿನ್ನವಾಗಿ, ಫೆಯ್ನಮನ್ ತಂತ್ರವು ತೊಡಗಿಸಿಕೊಳ್ಳುವಿಕೆ, ಪರೀಕ್ಷೆ ಮತ್ತು ಪುನರಾವರ್ತನೆಯನ್ನು ಬಯಸುತ್ತದೆ, ಇವೆಲ್ಲವೂ ಯಶಸ್ವಿ ಕಲಿಕೆಯ ಪ್ರಮುಖ ತತ್ವಗಳಾಗಿವೆ. ಒಟ್ಟಾರೆಯಾಗಿ ಇದು ಸಕ್ರಿಯ ಕಲಿಕೆಯನ್ನು ಪ್ರೋತ್ಸಾಹಿಸುತ್ತದೆ.









ರಾಜು. ಭೂಶೆಟ್ಟಿ
ಲೇಖಕರು, ಹುಬ್ಬಳ್ಳಿ

Scan For Digital Colourful
HAMPI TIMES E-paper

ಪರಿಕಲ್ಪನೆಯನ್ನು ಸಾಧ್ಯವಾದಷ್ಟು ಸರಳಭಾಷೆಯಲ್ಲಿ ವಿವರಿಸಲು ಪ್ರಯತ್ನಿಸುವುದು. ಅದು ಹೇಗಿರಬೇಕೆಂದರೆ 12 ವರ್ಷ ಅಥವಾ ಅದಕ್ಕಿಂತ ಕಡಿಮೆ ವಯಸ್ಸಿನ ಮಗುವಿಗೂ ಅರ್ಥವಾಗುವಂತಿರಬೇಕು. ಜೋರಾಗಿ ಮಾತನಾಡಬಹುದು, ಬರೆಯಬಹುದು ಅಥವಾ ರೆಕಾರ್ಡ್ ಮಾಡಬಹುದು. ಸಾಧ್ಯವಾದಷ್ಟು ಮಟ್ಟಿಗೆ ತಾಂತ್ರಿಕ ಪರಿಭಾಷೆಯನ್ನು ಬಳಸುವುದನ್ನು ತಪ್ಪಿಸುವುದರ ಜೊತೆಗೆ ಸಂಕೀರ್ಣ ವಾದ ಪದಗಳು ಅಥವಾ ಪದಗುಚ್ಛಗಳನ್ನು ಕೂಡ ಬಳಸದೇ ಎಲ್ಲವನ್ನೂ ಕೂಡ ಮಗುವಿಗೆ ಅರ್ಥವಾಗುವ ಆಡು ಭಾಷೆಯಲ್ಲಿಯೇ ಬಳಸುವುದಕ್ಕೆ ಆದ್ಯತೆ ಇರಲೇಬೇಕು. ಈ ರೀತಿಯಾಗಿ ಪರಿಕಲ್ಪನೆಯನ್ನು ಅರ್ಥವಾಗುವಂತೆ ಮಾಡುವುದು ಕೂಡ ಒಂದು ಸವಾಲಿನ ಕೆಲಸ. ಹೀಗಾಗಿ ಮೊದಲಿಗೆ ಈ ಸವಾಲಿಗೆ ಉತ್ತರ ಕಂಡುಕೊಳ್ಳಬೇಕು. ವಿದ್ಯಾರ್ಥಿಗಳು ತಮಗೆ ಗೊತ್ತಿಲ್ಲದ್ದನ್ನು ಗುರುತಿಸಿದ ನಂತರ ತಮ್ಮ ಕಲಿಕಾ ಸಾಮಗ್ರಿಗಳಿಗೆ ಹಿಂತಿರುಗಿ ವಿಷಯವನ್ನು ಮತ್ತೆ ಅಧ್ಯಯನ ಮಾಡಬೇಕಾಗುತ್ತದೆ, ವಿವರಿಸಲು ಕಷ್ಟವೆನಿಸಿದ ಭಾಗಗಳ ಮೇಲೆ ನಿರ್ದಿಷ್ಟವಾಗಿ ಗಮನಹರಿಸುವುದು. ಈ ಹಂತವು ನಿಷ್ಕ್ರೀಯ ಓದುವಿಕೆಯನ್ನು ಸಕ್ರಿಯ ತಿದ್ದುಪಡಿಯಾಗಿ ಪರಿವರ್ತಿಸುತ್ತದೆ. ಈಗ ಮೆದುಳು ಕಷ್ಟವೆನಿಸಿದ ಪರಿಕಲ್ಪನೆಗಳನ್ನು ಪೂರ್ಣಗೊಳಿಸಲು ಎದುರಿಸಿದ ಅಂಶಗಳನ್ನು ಸಕ್ರಿಯವಾಗಿ ಹುಡುಕುತ್ತದೆ, ಇದು ಅಧ್ಯಯನ ಅವಧಿಗಳನ್ನು ಹೆಚ್ಚು ಪರಿಣಾಮಕಾರಿ ಮತ್ತು ಆಕರ್ಷಕವಾಗಿ ಮಾಡುತ್ತದೆ. ವಿವರಣಾ ಹಂತವನ್ನು ಮತ್ತೆ ಪುನರಾವರ್ತಿಸಿ, ಹಿಂದೆ ಅಸ್ಪಷ್ಟವಾಗಿದ್ದ ಸಂಗತಿಗಳನ್ನು ಈಗ ವಿದ್ಯಾರ್ಥಿಯು ಸ್ವಂತ ವಾಕ್ಯಗಳಲ್ಲಿ ವಿವರಿಸಿದ್ದಾನೆ ಎಂಬುದನ್ನು ಖಚಿತಪಡಿಸಿಕೊಳ್ಳಲಾಗುತ್ತದೆ.

ಕಲಿಕೆಯ ಅಂತರವನ್ನು ತುಂಬಿದ ನಂತರ, ವಿವರಣೆಯನ್ನು ಪರಿಷ್ಕರಿಸುವುದು. ಅನಗತ್ಯ ಪರಿಭಾಷೆಯನ್ನು ತೆಗೆದುಹಾಕುವುದು. ಸರಳಭಾಷೆ ಮತ್ತು ದೈನಂದಿನ ಜೀವನಕ್ಕೆ ಸಂಬಂಧಿಸಿದ ಉದಾಹರಣೆ ಗಳನ್ನು ಬಳಸುವುದು. ಉದಾಹರಣೆಗೆ, ಘರ್ಷಣಾ ಬಲ ಎಂಬ ಪರಿಕಲ್ಪನೆಯನ್ನು ಸೈಕಲ್ ತುಳಿಯುವ ಒಂದು ಸಂದರ್ಭಕ್ಕೆ ಹೋಲಿಸಿ ವಿವರಿಸಬಹುದು. ಸೈಕಲ್ ತುಳಿಯುತ್ತಿರುವ ವ್ಯಕ್ತಿಯು ಅದನ್ನು ನಿಲ್ಲುವಂತೆ ಮಾಡಬೇಕೆಂದರೆ ಏನುಮಾಡಬೇಕು? ಎಂದು ಪ್ರಶ್ನಿಸಿದಾಗ ಅಯ್ಯೋ! ಇದೆಂಥ ಪ್ರಶ್ನೆ ಬ್ರೆಕ್ ಒತ್ತಿದರೆ ಆಯಿತು ಎಂದು ವಿದ್ಯಾರ್ಥಿಯು ಹೇಳುತ್ತಾನೆ. ಹಾಗಾದರೆ ಈ ಬ್ರೆಕ್ ಹಿಡಿದಾಗಲೇ ಸೈಕಲ್ ಏಕೆ ನಿಂತಿತು? ಎಂದು ಕೇಳಿದಾಗ ಘರ್ಷಣೆ ಯಿಂದಾಗಿ ಎಂದು ಹೇಳಬಹುದು. ಘರ್ಷಣೆ ಹೇಗೆ ಉಂಟಾಯಿತು? ಎಂದಾಗ ಅದು ಸೈಕಲ್‌ನ ಬ್ರೆಕ್ ಮತ್ತು ಗಾಲಿಗಳ ನಡುವೆ ಎಂದು ಹೇಳುತ್ತಾರೆ. ಹೀಗೆ ಯಾವುದೇ ಒಂದು ವಸ್ತುವಿನ ವೇಗ ಕಡಿಮೆ ಮಾಡಿ ಕೊನೆಗೆ ನಿಲ್ಲುವಂತೆ ಮಾಡುವ ಬಲವೇ ಘರ್ಷಣಾ ಬಲ ಎಂಬ ಪರಿಕಲ್ಪನೆಯನ್ನು ಅತೀ ಸುಲಭವಾಗಿ ಸರಳ ಭಾಷೆಯ ಪದಗಳನ್ನು ಬಳಸಿ ತಿಳಿಸಬಹುದಾಗಿದೆ.

ಒಂದು ವೇಳೆ ಘರ್ಷಣಾ ಬಲವೆಂಬುದು ಇಲ್ಲದೇ ಹೋಗಿದ್ದರೆ ಏನಾಗುತ್ತಿತ್ತು? ಈ ಭೂಮಿಯ ಮೇಲೆ ಯಾವುದೇ ಜೀವಿಗಳ ಅಸ್ತಿತ್ವವೇ ಇರುತ್ತಿರಲಿಲ್ಲ. ಏಕೆಂದರೆ ವೇಗವಾಗಿ ಬೀಸುವ ಚಂಡಮಾರುತಗಳು ಭೂಮಿಯ ಮೇಲ್ಮೈಗೆ ಅಪ್ಪಳಿಸಿದಾಗ ಅಲ್ಲಿ ಘರ್ಷಣೆ ಏರ್ಪಟ್ಟು ಗಾಳಿಯ ವೇಗವು ತಗ್ಗುತ್ತದೆ. ಹೀಗಾಗಿ ಗಾಳಿಯ ವೇಗವನ್ನು ತಗ್ಗಿಸುವುದರ ಜೊತೆಗೆ ಅದರ ದಿಕ್ಕನ್ನು ಕೂಡ ಬದಲಿಸಲು ಘರ್ಷಣಾ ಬಲ ಸಹಾಯಕವಾಗಿದೆ. ಘರ್ಷಣಾ ಬಲ ಇಲ್ಲದಿದ್ದರೆ ಚಲಿಸುವ ವಸ್ತುಗಳು ನಿರಂತರವಾಗಿ ಚಲನೆಯಲ್ಲಿಯೇ ಇರುತ್ತಿದ್ದವು, ಅವುಗಳನ್ನು ನಿಲ್ಲಿಸುವುದು ಸಾಧ್ಯವಾಗುತ್ತಿರಲಿಲ್ಲ. ಕಟ್ಟಡ ಕಟ್ಟುವಾಗ ಕಟ್ಟಡಕ್ಕೆ ಬೇಕಾಗುವ ಸಾಮಗ್ರಿಗಳನ್ನು ಹಿಡಿದಿಟ್ಟುಕೊಳ್ಳುವುದು ಇದೇ ಘರ್ಷಣಾ ಬಲ. ಹಾಳೆಯ ಮೇಲೆ ಪೆನ್ನಿನಿಂದ ಬರೆಯುವುದು, ಬೆಂಕಿ ಪೊಟ್ಟಣಕ್ಕೆ ಕಡ್ಡಿಯನ್ನು ಉಜ್ಜಿ ಬೆಂಕಿ ಕಡ್ಡಿ ಹಚ್ಚುವುದು ಕೂಡ ಇದೇ ಘರ್ಷಣಾ ಬಲದಿಂದಲೇ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಅಂಕುಶ

ಬದುಕೊಂದು ಮಾಯೆಯ ಮೋಹಪಾಶ
ಆಗದಿರು ಅರಿಷಡ್ವರ್ಗಗಳಿಗೆ ನೀ ದಾಸ
ಆಸೆ ವ್ಯಾಮೋಹಗಳಿಗೆ ಹಾಕುವ ಅಂಕುಶ
ಸಾಧನೆಯಿಂದಲೇ ಭವಭೀತಿಯ ನಾಶ

ಗಹನವಿದೆ ಕರ್ಮದ ಗತಿಯು
ಅರಿತವರಿಲ್ಲ ಮಾಯೆಯ ಮಿತಿಯು
ನಿರಂತರವಿರಲಿ ದೈವದ ಸ್ತುತಿಯು
ಸುಜ್ಞಾನದಿ ಬೆಳಗಲಿ ಮತಿಯು

–ಚೇತನ ಭಾರ್ಗವ, ಬೆಂಗಳೂರು

### ನೀನೆಂದರೆ ನನಗಿಷ್ಟ

ಮನದಾಳದಿಂದೇಳುವೆ,
ನೀನೆಂದರೆ ನನಗಿಷ್ಟ.

ಕಪ್ಪು ಬೆಳ್ಳಗೆ ಇದ್ದರೂ
ಜತೆ ಬಯಸುವೆ ಹೇಗಿದ್ದರೂ.

ನಿನ್ನನಗಲುವುದು ಕಷ್ಟ,
ಬಿಟ್ಟಿರುವ ಬದುಕು ಇನ್ನೂಕಷ್ಟ.

ಬೇಜಾರು ಚಿಂತೆಯಲಿ,
ಏಕಾಂತ ವಾಸದಲಿ ನೀನಾಸರೆ.

ಸಭೆ,ಹರಟೆ, ಸಂತೋಷದ
ಸಮಾರಂಭದಲಿ ನಿನ್ನ ಸಂಬ್ರಮ.

ದುಃಖ ದುಮ್ಮಾನದಲಿ ಕೂಡಾ,
ಅಗಲಿರಲಾರದು ನೋಡಾ.

ನೀ ಎನ್ನ ಆವರಿಸಿದಾಗ,
ಮೂಡುವುದು ಚೈತನ್ಯ ಆಗ.

ಮುಚ್ಚಿಡುವುದೇಕೆ ಹೆಸರು,
ಬಿಚ್ಚಿಡಲೇ ಎಲ್ಲರಿಗೂ ಈಗ.

ನೀನೆನ್ನ ಪ್ರೀತಿಯ ಪಾನೀಯ
"ಚಹಾ" ವಾಹ್ ನನ್ನ "ಚಹಾ"

– ಲಕುಮಿಸುತ ಸಾರವಾಡ

## ಗ್ರಾಪಂ ಉಪಚುನಾವಣೆ : ಮದ್ಯ ಮಾರಾಟ ನಿಷೇಧ.

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲೆಯ ಹಗರಿಬೊಮ್ಮಹಳ್ಳಿ ತಾಲೂಕಿನ ಮಾಲವಿ ಗ್ರಾಪಂ ಹಾಗೂ ಕೂಡ್ಲಿಗಿ ತಾಲೂಕಿನ ಗುಂಡುಮುಣುಗು ಗ್ರಾಪಂಗಳಲ್ಲಿ ತೆರವಾದ ಸ್ಥಾನಕ್ಕೆ ಮೇ.25 ರಂದು ಚುನಾವಣೆ ನಡೆಯಲಿದ್ದು, ಚುನಾವಣೆ ನಡೆಯುವ ಗ್ರಾಪಂ ವ್ಯಾಪ್ತಿಗಳಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಮದ್ಯ ಮಾರಾಟ ನಿಷೇಧಿಸಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಆದೇಶ ಹೊರಡಿಸಿದ್ದಾರೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ 1993 ರ ಪ್ರಕರಣ 308ಎಸಿ ರಂತೆ ಮೇ.23 ರ ಸಂಜೆ 5 ಗಂಟೆಯಿಂದ ಮೇ.25 ರ ಸಂಜೆ 5 ಗಂಟೆವರೆಗೆ ನೀತಿ ಸಂಹಿತೆ ಜಾರಿಯಲ್ಲಿರುವ ಪ್ರದೇಶಗಳಲ್ಲಿ ಎಲ್ಲಾ ರೀತಿಯ ಮದ್ಯಾಪಾನ ಮಾರಾಟ ಮತ್ತು ಸಾಗಾಣಿಕೆ ಮಾಡದಂತೆ ಹಾಗೂ ಮದ್ಯ ತಯಾರಿಕಾ ಘಟಕಗಳನ್ನು ಮತ್ತು ಮದ್ಯದಂಗಡಿಯನ್ನು ಮುಚ್ಚುವಂತೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

## ಡಿಜಿಟಲ್ ವ್ಯವಸ್ಥೆಯಡಿ ಭೂದಾಖಲೆಗಳ ವಿತರಣೆ

**ಹಂಪಿ ಟೈಮ್ಸ್ ದಾವಣಗೆರೆ**

ಭೂ ಸುರಕ್ಷಾ ಯೋಜನೆಯಡಿ ಕಂದಾಯ ದಾಖಲೆಗಳನ್ನು ಡಿಜಿಟಲ್ ವ್ಯವಸ್ಥೆಯ ಮೂಲಕವೇ ಡಿಜಿಟಲ್ ಭೂ ದಾಖಲೆಗಳ ವಿತರಣೆ ಮಾಡಲಾಗುತ್ತದೆ ಎಂದು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ.ಜಿ.ಎಂ ತಿಳಿಸಿದ್ದಾರೆ.

ಕಂದಾಯ ದಾಖಲೆಗಳನ್ನು ಡಿಜಿಟಲ್ ವ್ಯವಸ್ಥೆಯ ಮೂಲಕವೇ ಜಾರಿಗೆ ತರುವ ಉದ್ದೇಶದಿಂದ ಪ್ರಾರಂಭಿಕ ಹಂತದಲ್ಲಿ ಪ್ರತಿ ದಿನ ಕನಿಷ್ಠ 10 ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಪಡೆದು, ಡಿಜಿಟಲ್ ಪ್ರತಿಗಳನ್ನು ತಂತ್ರಾಂಶ ದಲ್ಲಿಯೇ 2 ದಿನಗಳೊಳಗಾಗಿ ನೀಡಲು, ದಾಖಲೆಯು ಸ್ಕ್ಯಾನಿಂಗ್ ಆಗದೇ ಇದ್ದಲ್ಲಿ 7 ದಿನಗಳೊಳಗಾಗಿ ಸ್ಕ್ಯಾನಿಂಗ್ ಮಾಡಿ ಡಿಜಿಟಲ್ ಪ್ರತಿಯನ್ನೇ ಸಾರ್ವಜನಿಕರಿಗೆ ವಿತರಿಸಬೇಕು.

ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಈ ವ್ಯವಸ್ಥೆಯನ್ನು ಜಾರಿಗೆ ತರಲು ತಿಳಿಸಲಾಗಿದ್ದು ಜೂನ್ 2025 ರ ನಂತರ ಕಡ್ಡಾಯವಾಗಿ ಕಂದಾಯ ದಾಖಲೆಗಳನ್ನು ಡಿಜಿಟಲ್ ಭೂ ದಾಖಲೆಗಳ ವಿತರಣೆ ಮೂಲಕ ಸಾರ್ವಜನಿಕರಿಗೆ ಒದಗಿಸಲಾಗುವುದು. ಈ ಜಿಲ್ಲೆಯ ಎಲ್ಲಾ ಕಂದಾಯ ಕಚೇರಿಗಳ ಅಭಿಲೇಖಾಲಯಗಳಲ್ಲಿ ನೀಡುವ ದೃಢೀಕೃತ ನಕಲು ಪ್ರತಿಗಳನ್ನು ಕಡ್ಡಾಯವಾಗಿ ಕಂದಾಯ ದಾಖಲೆಗಳ ಗಣಕೀಕರಣ ತಂತ್ರಾಂಶದ ಮೂಲಕ ವಿತರಣೆ ಮಾಡಲಾಗುವುದು.

**ಯೋಧರ ಕುಟುಂಬದ ಸದಸ್ಯರು ನಮ್ಮಂತೆ ಸಾಮಾನ್ಯ ಜೀವನ ನಡೆಸುವುದಿಲ್ಲ. ಪಡುವಣದಲ್ಲಿ ಮುಳುಗಿದ ರವಿ ಮತ್ತೆ ಮೂಡಣದಲ್ಲಿ ಮೂಡಿ ಬರುವ ಎಂಬ ಭರವಸೆ ನಮಗೆ ಖಂಡಿತವಾಗಿಯೂ ಇದೆ. ಕಚೇರಿಗೆ ಹೋದವರು ಸಂಜೆ ಮನೆಗೆ ಬರಬಹುದು ಆದರೆ ಇದೇ ಭರವಸೆಯನ್ನು ಸೈನಿಕರ ಪತ್ನಿಯರು ಹೊಂದಿರಲು ಸಾಧ್ಯವೇ?**

# ಭಾರತೀಯ ಯೋಧ ಮತ್ತು ಆತನ ಕುಟುಂಬ

ಆ ಮನೆಯ ಹೆಣ್ಣು ಮಗಳು ಒಂದು ಕೈಯಲ್ಲಿ ಅಳುವ ಪುಟ್ಟ ಮಗುವನ್ನು ಸಂಭಾಳಿಸುತ್ತಲೇ ಮತ್ತೊಂದು ಕೈಯಲ್ಲಿ ಒಲೆಯ ಮೇಲಿಟ್ಟ ಚಹವನ್ನು ತನ್ನ ಬಲಗೈಯಿಂದ ಸೋಸಿ ನಿಧಾನವಾಗಿ ಅದೇ ಕೈಯಲ್ಲಿ ಹಿಡಿದು ತಂದು ಅತ್ತೆಯ ಕೈಗೆ ಕೊಟ್ಟಳು.

ಆಗ ತಾನೇ ಬಚ್ಚಲಿನಿಂದ ಹೊರಬಂದ ಅತ್ತೆ ಎಲ್ಲಾ ಕೆಲಸ ನಿನ್ನ ಮೇಲೆ ಬಿತ್ತು... ನನಗೆ ಸುಸ್ತಾಗದೆ ಇದ್ರೆ ನಿನಗೆ ಒಂಚೂರು ಸಹಾಯ ಮಾಡಬಹುದಿತ್ತು ಎಂದು ಅಲವತ್ತುಕೊಂಡರು..

ಪರವಾಗಿಲ್ಲ ಅತ್ತೆ ಒಂದೆರಡು ದಿನ ರೆಸ್ಟ್ ಮಾಡಿ ತಂತಾನೇ ಸರಿ ಹೋಗುತ್ತೆ ಎಂದು ಅತ್ತೆಗೆ ಸಮಾಧಾನ ಹೇಳಿದ ಆಕೆ ಅವರು ಚಹಾ ಕುಡಿಯುವವರೆಗೂ ಅಲ್ಲಿಯೇ ಇದ್ದು ನಂತರ ಮಗುವನ್ನು ಅವರ ಹಾಸಿಗೆಯ ಮೇಲೆ ಮಲಗಿಸಿ ಆಡಲು ಬಿಟ್ಟಳು.

ಅತ್ತೆ, ನೀವು ಸ್ವಲ್ಪ ಹೊತ್ತು ಮಗುನ ನೋಡ್ಕೊಳ್ಳಿ... ನಾನು ಪುಟ್ಟನ್ನ ಎಬ್ಬಿಸಿ ರೆಡಿ ಮಾಡಿ ಶಾಲೆಗೆ ಕಳಿಸಿ ಬರ್ತೇನೆ ಎಂದು ಹೇಳಿದಾಗ ಆಯ್ತು ಎಂದು ಹೇಳಿದ ಅತ್ತೆ 'ನಿಮ್ಮ ಮಾವ ಎದ್ದಿದ್ದಾರೆಯೇ?: ಎಂದು ಕೇಳಿದರು.

"ಹೂಂ ಅತ್ತೆ, ಬಿಸಿ ನೀರು ಕುಡಿದು ವಾಕಿಂಗ್ ಹೋಗಿದ್ದಾರೆ. ಅಲ್ಲೇ ಬರುವಾಗ ಹಾಲು ತರೋಕೆ ಹೇಳಿದೀನಿ ಇನ್ನೇನು ಬರೋ ಹೊತ್ತು "ಎಂದು ಹೇಳಿದಳು.

"ಆಯ್ತು. ನೀನು ಹೋಗಮ್ಮ ನಿನ್ನ ಕೆಲಸ ಮಾಡ್ಕೋ.... ಮಗುವನ್ನು ನನ್ನ ಮುಂದೆ ಮಲಗಿಸು ಎಂದು ಅತ್ತೆ ಹೇಳಲು ಆಯ್ತು ಅತ್ತೆ ಎಂದು ಹೇಳುತ್ತಾ ಕೋಣೆಯಿಂದ ಹೊರಬಂದಳು.

ಸೀದಾ ತನ್ನ ಕೋಣೆಗೆ ತೆರಳಿದವಳೇ ಆರಾಮಾಗಿ ಮಲಗಿದ್ದ ಪುಟ್ಟ ಮಗುವನ್ನು ಕಂಡು ತೃಪ್ತಿಯಿಂದ ನೋಡಿ ಆತನ ಹಣೆಗೆ ಮುದ್ದಿಟ್ಟು ನಿಧಾನವಾಗಿ ತಟ್ಟಿ ಏಳು ಪುಟ್ಟ, ಶಾಲೆಗೆ ಹೊತ್ತಾಗುತ್ತೆ ಎಂದು ಎಬ್ಬಿಸಿದಳು.

ಸ್ವಲ್ಪ ಕುಸುಗರೆಯುತ್ತಲೇ ಎದ್ದ ಮಗು ತಾಯಿಯ ಕೊರಳಿಗೆ ಜೋತು ಬಿದ್ದಿತ್ತು. ಹಾಗೆ ಜೋತು ಬಿದ್ದ ಮಗುವನ್ನು ಮುದ್ದಿಸುತ್ತಾ ಸೀದಾ ಬಚ್ಚಲು ಮನೆಗೆ ಕರೆ ತಂದು ಹಲ್ಲುಜ್ಜಿಸಿ, ಟಾಯ್ಲೆಟ್ ಗೆ ಕಳಿಸಿದಳು. ನಂತರ ಅಡುಗೆ ಮನೆಗೆ ಹೋಗಿ ಮಗ ಹೊರಗೆ ಬರುವವರೆಗೆ ತಿಂಡಿಗೆ ತಯಾರಿ ಮಾಡಿದಳು. ಟಾಯ್ಲೆಟ್ ಮುಗಿಸಿ ಬಂದ ಮಗನಿಗೆ ಸ್ನಾನ ಮಾಡಿಸಿ ಬಟ್ಟೆ ಹಾಕಿ ಶಾಲೆಗೆ ತಯಾರು ಮಾಡಿ ಅಡುಗೆ ಮನೆಗೆ ಕರೆತಂದು ಹಾಲಿನ ಗ್ಲಾಸನ್ನು ಆತನ ಕೈಯಲ್ಲಿಟ್ಟು ಬೇಗನೆ ತಿಂಡಿಯನ್ನು ತಯಾರಿಸಿ ಆತನ ಡಬ್ಬಕ್ಕೆ ತುಂಬಿ ಮರಳಿ ಬಂದು ಆತನಿಗೆ ತಿಂಡಿಯನ್ನು ತಿನ್ನಿಸಿ ನೀರು ಕುಡಿಸಿ ಶೂ ಮತ್ತು ಸಾಕ್ಸ್ ಗಳನ್ನು ಹಾಕಿ ತುಸು ಎಳೆದಂತೆಯೇ ಕರೆದೊಯ್ದು ಸ್ಕೂಲಿನ ಬಸ್ ಬರುವಲ್ಲಿ ನಿಂತು ಆತನನ್ನು ಬಸ್ ಹತ್ತಿಸಿ ಮನೆಗೆ ಬಂದಾಗ ಮನೆಯಲ್ಲಿ ಅತ್ತೆ ಮಾವ ತಿಂಡಿಗಾಗಿ ಕಾಯುತ್ತಿದ್ದರು. ಬೇಗ ಬೇಗನೇ ಅವರಿಬ್ಬರಿಗೂ ತಿಂಡಿ ಕೊಟ್ಟು, ಮಗುವಿಗೆ ಹಾಲುಣಿಸಿ ಮಲಗಿಸಿ ಉಳಿದ ಅಡುಗೆ ಮನೆ ಕೆಲಸಗಳನ್ನು ಪೂರೈಸಿ ಸ್ನಾನ, ಪೂಜೆ,ತಿಂಡಿ ಮುಗಿಸಿ ಮತ್ತೆ ಅತ್ತೆಯ ಬಳಿ ಮಲಗಿದ್ದ ಮಗುವಿನ ಬಳಿ ಬಂದಳು. ಅಜ್ಜಿ ತಾತನ ಮಾತಿಗೆ ಹೂಂಗುಡುತ್ತಿದ್ದ 5 ತಿಂಗಳ ಪುಟ್ಟ ಬಾಲೆ ತಾಯಿಯ ಧ್ವನಿಯನ್ನು ಕೇಳಿ ಕಣ್ಣರಳಿಸಿ ಎತ್ತಿಕೋ ಎಂಬಂತೆ ಎರಡು ಕೈಗಳನ್ನು ಮೇಲೆ ಚಾಚಿದಳು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ತಾಯಿ ತನ್ನೆರಡು ಮಕ್ಕಳೊಂದಿಗೆ ಅತ್ತೆ ಮಾವನ ಜೊತೆ ವಾಸವಾಗಿದ್ದಾಳೆ. ಮೇಲ್ನೋಟಕ್ಕೆ ಎಲ್ಲವೂ ಸರಿಯಾಗಿದೆ. ಎಲ್ಲರೂ ತಂತಮ್ಮ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿದ್ದಾರೆ. ಹಾಗಾದರೆ ಎಲ್ಲಿದ್ದಾನೆ ಆ ಮನೆಯ ಯಜಮಾನ?. ತನ್ನ ಅಪ್ಪ ಅಮ್ಮ



ಮತ್ತು ಮಕ್ಕಳ ಜವಾಬ್ದಾರಿಯನ್ನು ಪತ್ನಿಯ ಮೇಲೆ ಹೊರಿಸಿ ಎಲ್ಲಿ ಹೋಗಿರಬಹುದು ಆತ? ಅವರಾರು ಆತನ ಜವಾಬ್ದಾರಿಯ ಕುರಿತು ಮಾತನಾಡುವುದಿಲ್ಲ ಏಕೆ?

ಕಾರಣ ಅವರಿಗೆ ಸ್ಪಷ್ಟವಾಗಿ ಗೊತ್ತಿದೆ.... ಆತ ಭಾರತ ಮಾತೆಯ ಸೇವೆಯಲ್ಲಿ ಸಾವಿರಾರು ಕಿಲೋಮೀಟರ್ ದೂರದ ಹಿಮಾಲಯದ ತಪ್ಪಲಿನಲ್ಲಿ ನಡುಗುವ ಚಳಿಯಲ್ಲಿ ಯಾವುದೇ ಕ್ಷಣದಲ್ಲಿಯೂ ಸಂಭವಿಸಬಹುದಾದ ಆಕಸ್ಮಿಕಗಳನ್ನು ಎದುರಿಸುವ ನಿಟ್ಟಿನಲ್ಲಿ ಸದಾ ಸನ್ನದ್ಧನಾಗಿ ನಿಂತಿದ್ದಾನೆಂದು.

ಆತನ ತಾಯಿ..ಮಗ ಯಾವುದೇ ಅಪಾಯಗಳಿಗೆ ಸಿಲುಕದಿರಲಿ ಎಂದು ದೇವರಲ್ಲಿ ಮೊರೆ ಇಟ್ಟರೆ ತಂದೆ ಮೌನವಾಗಿ ನಿಟ್ಟುಸಿರಿಡುತ್ತಾರೆ. ಪತಿಯ ಗೈರುಹಾಜರಿಯ ನೋವಿನಲ್ಲಿ ಮನೆಯ,ಅತ್ತೆ ಮಾವನ ಮತ್ತು ಮಕ್ಕಳ ಜವಾಬ್ದಾರಿಯನ್ನು ನೀಗಿಸಿಕೊಂಡು ಹೋಗುವ ಪತ್ನಿ ರಾತ್ರಿಯ ನೀರವ ಮೌನದಲ್ಲಿ ಕಣ್ಣೀರಿಟ್ಟರೂ ಮರುದಿನ ಮುಂಜಾನೆ ಏನೂ ನಡೆದೇ ಇಲ್ಲ ಎನ್ನುವಂತೆ ಅತ್ತೆ ಮಾವನ ಮುಂದೆ ನಗುನಗುತ್ತಾ ನಿಲ್ಲುತ್ತಾಳೆ. ಆಕೆಯ ಹುಸಿ ನಗು ಅತ್ತೆ ಮಾವನಿಗೂ ಗೊತ್ತು ಆದರೂ ಏನೂ ಅರಿಯದವರಂತೆ ಮುಗ್ಧ ನಗುವನ್ನು ಸೂಸುತ್ತಾರೆ. ಇನ್ನು ಪುಟ್ಟ ಮಗ ಆಗಾಗ ತಂದೆ ಮಾಡುವ ಫೋನ್ ಕರೆಗೆ ಕಾಯುತ್ತಾನೆ.... ಆತನ ಫೋನ್ ಬಂದಾಗ ಮನೆಮಂದಿಯೆಲ್ಲ ಸಂಭ್ರಮದಿಂದ ಮಾತನಾಡಿ ಎಲ್ಲವೂ ಸರಿಯಾಗಿದೆ ತಾನೇ? ಎಂದು ಕೇಳಿ ನೆಮ್ಮದಿಯ ನಿಟ್ಟುಸಿರಿಡುತ್ತಾರೆ. ವರ್ಷದ ಯಾವುದೋ ಒಂದು ತಿಂಗಳು ಬಂದು ಹೋಗುವ ತಂದೆ ಸುರಿಸುವ ಅಪಾರ ಪ್ರೀತಿಯ ಧಾರೆಯನ್ನು ನೆನೆದು "ಅಮ್ಮ, ಅಪ್ಪ ಯಾವಾಗ ಬರುತ್ತಾರೆ?" ಎಂದು ತಾಯಿಯನ್ನು ಕೇಳುತ್ತಾನೆ. ಆಕೆಗೆ ಉತ್ತರ ಗೊತ್ತಿಲ್ಲವೆಂದಲ್ಲ.ಅನಿಶ್ಚಿತತೆಯೇ ಅವರ ಬದುಕು.

ಇದು ಒಂದು ಮನೆಯ ಕಥೆಯಲ್ಲ.... ತುಸು ಹೆಚ್ಚು ಕಮ್ಮಿ ಎಲ್ಲಾ ಸೈನಿಕರ ಮನೆಯ ಕಥೆ.

ನಿಜ! ಸೈನಿಕರ ಜೀವನ ಸುಲಭ ಅಲ್ಲ... ಶತ್ರುಗಳು ಯಾವಾಗ ಬೇಕಾದರೂ ದಾಳಿ ಮಾಡಬಹುದು ಮೈಯೆಲ್ಲ ಕಣ್ಣಾಗಿ ಗಡಿಯನ್ನು ಕಾಯುವ ಸೈನಿಕರು ಯಾವುದೇ ರೀತಿಯ ತುರ್ತು ಪರಿಸ್ಥಿತಿಯಲ್ಲಿ ಸದಾ ಸನ್ನದ್ಧರಾಗಿ ಇರುವವರು. ತಮ್ಮ ಕುಟುಂಬದವರಿಂದ ದೂರ ಇರುವ ಅವರಿಗೆ ತಾಯಿ ಭಾರತಿಯ ಸೇವೆಯೇ ಮೊದಲ ಆದ್ಯತೆಯಾಗಿರುತ್ತದೆ. ಅದರಲ್ಲೂ ಭಾರತೀಯ ಮಿಲಿಟರಿ ಪಡೆ ತನ್ನ ದೇಶಪ್ರೇಮಕ್ಕೆ ಹೆಸರಾಗಿದೆ. ದೇಶದ ಮಾನ ಕಾಪಾಡಲು ತನ್ನ ಪ್ರಾಣವನ್ನು ಕೊಡಲು ಹಿಂಜರಿಯದ ಬಿಸಿ ರಕ್ತದ ಸೈನಿಕರ ಪಡೆಯೇ ನಮ್ಮಲ್ಲಿದೆ. ಬಿರು ಬಿಸಿಲಿನ ಮರುಭೂಮಿಯಿರಲಿ, ಕೊರೆಯುವ ಹಿಮಾಲಯದ ಚಳಿ ಇರಲಿ, ಅದೆಷ್ಟೇ ಏರಿಳಿತಗಳ ಕೊರಕಲು ಹಾದಿಯಿರಲಿ ಭಾರತೀಯ ಸೈನಿಕ ಮೈಯೆಲ್ಲ ಕಣ್ಣಾಗಿಸಿಕೊಂಡು ನಮ್ಮ ದೇಶದ ಗಡಿಯನ್ನು ಕಾಯುತ್ತಿರುತ್ತಾನೆ. ದೇಶದಲ್ಲಿ ಆಂತರಿಕವಾಗಿ ಯಾವುದೇ ದೊಂಬಿ, ಗಲಾಟೆಗಳು ನಡೆದಾಗಲೂ ಕೂಡ ಸೈನಿಕ ತನ್ನ ತಂಡದೊಂದಿಗೆ ಅಲ್ಲಿ ಹಾಜರಾಗಬೇಕು. ಪ್ರವಾಹ ಸುನಾಮಿ ನೆರೆ ಕಾಲ್ಗೆಚ್ಚು ಎಂದು ಯಾವುದೇ ಪ್ರಾಕೃತಿಕ ವಿಕೋಪಗಳು ಸಂಭವಿಸಿದಾಗ ಅಲ್ಲಿಯೂ ಆತನ ಹಾಜರಾತಿ ಕಡ್ಡಾಯ.

ಯೋಧನೇನು ಭಾವನೆಗಳಿಲ್ಲದ ಬರಡು ವ್ಯಕ್ತಿಯಲ್ಲ. ತಂದೆ ತಾಯಿಗಳನ್ನು ಗೌರವಿಸುವ ಪತ್ನಿ ಮತ್ತು ಮಕ್ಕಳನ್ನು ಪ್ರೀತಿಸುವ ತನ್ನ ಕೌಟುಂಬಿಕ ಜವಾಬ್ದಾರಿಗಳನ್ನು ಆತ ಅರಿತಿದ್ದಾನೆ ಆದರೆ ಕುಟುಂಬ ಮತ್ತು ದೇಶ ಸೇವೆ ಎಂಬ ಆಯ್ಕೆಗಳು ಬಂದಾಗ ಆತನ ಮೊದಲ ಆಯ್ಕೆ ದೇಶ ಸೇವೆಯೇ ಆಗಿರುತ್ತದೆ.

ತನ್ನ ಕರ್ತವ್ಯದ ಕರೆಗೆ ಸೈನಿಕ ಓಗೊಟ್ಟರೆ

ಅಪಾಯದ ಅಂಚಿನಲ್ಲಿ ಕಾರ್ಯನಿರ್ವಹಿಸುವ ಸೈನಿಕರಷ್ಟೇ ಧೈರ್ಯ, ಆತ್ಮವಿಶ್ವಾಸ ಮತ್ತು ದೃಢತೆಗಳು ಅವರ ಕುಟುಂಬದ ಸದಸ್ಯರಲ್ಲಿ ಕೂಡ ಇರುತ್ತವೆ. ಮನದಲ್ಲಿ ಆತಂಕ ಮಡುಗಟ್ಟಿದ್ದರೂ ಮುಖದಲ್ಲಿ ಹುಸಿನಗೆಯನ್ನು ಮೂಡಿಸಿಕೊಂಡು ಎಲ್ಲರೊಂದಿಗೆ ವ್ಯವಹರಿಸಬೇಕಾಗುತ್ತದೆ. ಇನ್ನು ಯುದ್ಧ, ಸಂಘರ್ಷಗಳ ಸಮಯದಲ್ಲಂತೂ ಅವರ ಎದೆಯಲ್ಲಿ ಭತ್ತ ಕುಟ್ಟಿದಂತಹ ಅನುಭವ.

ತಮ್ಮ ಬದುಕಿನ ಬಹು ಮುಖ್ಯ ಭಾಗವನ್ನು ಸೈನಿಕ ಮಿಲಿಟರಿ ನೆಲೆಯಲ್ಲಿ ಕಳೆದರೆ ಆತನ ಪತ್ನಿ ಎಲ್ಲ ಕೌಟುಂಬಿಕ ಜವಾಬ್ದಾರಿಗಳನ್ನು ನಿರ್ವಹಿಸುತ್ತಾಳೆ. ಆಕೆಯ ಪತಿ ಒಬ್ಬನೇ ಮಗನಾಗಿದ್ದರೆ ಅತ್ತೆ ಮಾವನ ಜವಾಬ್ದಾರಿ, ಮಕ್ಕಳ ಊಟ ತಿಂಡಿ, ದಿನಸಿ ತರಕಾರಿ ತರುವುದು ಕರೆಂಟ್ ಬಿಲ್ ಕಟ್ಟುವುದು ಹೀಗೆ ಹತ್ತು ಹಲವು ಮನೆಯ ಒಳ ಹೊರಗಿನ ಕೆಲಸಗಳಿಗೆ ಆಕೆಯೇ ತಲೆ ಕೊಡಬೇಕು. ಕೊಂಚಮಟ್ಟಿಗೆ ಇದೆಲ್ಲವೂ ಓಕೆ!

ಆದರೆ ಒಮ್ಮೊಮ್ಮೆ ಹೊತ್ತಲ್ಲದ ಹೊತ್ತಿನಲ್ಲಿ ಮಕ್ಕಳಿಗೆ, ಹಿರಿಯರಿಗೆ ಅನಾರೋಗ್ಯವಾದಾಗ ದೈಹಿಕ ಸ್ವಾಸ್ಥ್ಯದಲ್ಲಿ ವ್ಯತ್ಯಾಸವಾದಾಗ ಶೀಘ್ರವೇ ವೈದ್ಯರನ್ನು ಕಾಣುವ ಸಂದರ್ಭಗಳು ಆಕೆಯನ್ನು ಧೃತಿಗೆಡಿಸುತ್ತವೆ. ಮತ್ತೆ ಕೆಲ ಬಾರಿ ಬ್ಯಾಂಕಿನ ವ್ಯವಹಾರಗಳು ಕೂಡ ಆಕೆಯಲ್ಲಿ ಭಯವನ್ನು ಆತಂಕವನ್ನು ಹುಟ್ಟಿಸುತ್ತವೆ. ಕೂಡಲೇ ಗಂಡನಿಗೆ ಕರೆ ಮಾಡಿ ಕೇಳಿ ನಿರ್ಧರಿಸೋಣ ಎಂದರೆ ನೆಟ್ವರ್ಕ್ ಕೂಡ ಸಿಗದ ಜಾಗದಲ್ಲಿ ಗಂಡ ಕರ್ತವ್ಯನಿರತನಾಗಿರುತ್ತಾನೆ.

ಆದ್ದರಿಂದಲೇ ಸೈನಿಕರಷ್ಟೇ ಅವರ ಪತ್ನಿಯರು ಕೂಡ ಧೈರ್ಯ ಶಾಲಿಗಳು ಎಂದರೆ ತಪ್ಪಿಲ್ಲ. ಅವರ ಧೈರ್ಯವನ್ನು ಮೆಡಲುಗಳಿಂದ ಪೆರೇಡ್ ಗಳಿಂದ ಅಳೆಯಲಾಗುವುದಿಲ್ಲ ಎಂಬುದೇನೋ ನಿಜ ಆದರೆ ಗಟ್ಟಿಯಾದ ಹೃದಯ ಮತ್ತು ಭರವಸೆಯ ಬಲದಿಂದ ಮೌನವಾಗಿ ಆಕೆಯು ಕೂಡ ಅಗೋಚರ ಯುದ್ಧದಲ್ಲಿ ಭಾಗಿಯಾಗಿರುತ್ತಾಳೆ.

ಯಾವುದೇ ರೀತಿಯ ರಾಜಿಗೂ ಒಳಗಾಗದೆ ತಮ್ಮ ಅಪ್ಪಟ ದೇಶ ಭಕ್ತಿಯ ಕಾರಣಕ್ಕಾಗಿ ಸೈನಿಕರು ಹೆಸರಾಗಿರಲು ಕಾರಣ ಮನೆಯಲ್ಲಿ ಅವರ ಪತ್ನಿಯರು ಕುಟುಂಬದ ಸದಸ್ಯರು ಅವರಿಗೆ ನೀಡಿರುವ ಬೆಂಬಲ ದಿಂದ ಮಾತ್ರ... ಸೈನಿಕನಿಗೂ ಅಚಲವಾದ ಪ್ರೀತಿಯ ಬುನಾದಿ ಬೇಕೇ ಬೇಕು ಅಲ್ಲವೇ?

ತನ್ನ ಗೈರು ಹಾಜರಿಯಲ್ಲಿ ಎಲ್ಲವೂ ಸುಗಮವಾಗಿ ನಡೆದು ಹೋಗುತ್ತದೆ ಎಂಬ ನಂಬಿಕೆಯ ಬಲದಿಂದಲೇ ಆತ ಯುದ್ಧ ರಂಗದಲ್ಲಿ ಗಟ್ಟಿಯಾಗಿ ಕಾಲೂರಿ ಕಾರ್ಯನಿರ್ವಹಿಸುತ್ತಾನೆ.

ಯೋಧರ ಕುಟುಂಬದ ಸದಸ್ಯರು ನಮ್ಮಂತೆ ಸಾಮಾನ್ಯ ಜೀವನ ನಡೆಸುವುದಿಲ್ಲ. ಪಡುವಣದಲ್ಲಿ ಮುಳುಗಿದ ರವಿ ಮತ್ತೆ ಮೂಡಣದಲ್ಲಿ ಮೂಡಿ ಬರುವ ಎಂಬ ಭರವಸೆ ನಮಗೆ ಖಂಡಿತವಾಗಿಯೂ ಇದೆ. ಮುಂಜಾನೆ ಕಚೇರಿಗೆ ಹೋದವರು ಸಂಜೆ ಮನೆಗೆ ಬರಬಹುದು ಆದರೆ ಇದೇ ಭರವಸೆಯನ್ನು ಸೈನಿಕರ ಪತ್ನಿಯರು ಹೊಂದಿರಲು ಸಾಧ್ಯವಿಲ್ಲ. ಇಂತಹ ವೀರಯೋಧರ ಕುರಿತು ನಮಗೆ ಹೆಮ್ಮೆಯಿರಲಿ. ಅವರ ಕುಟುಂಬದೆಡೆ ಸಹಾನುಭೂತಿಯಿರಲಿ, ಅವಶ್ಯಕತೆ ಬಿದ್ದಾಗ ಸಹಾಯ ಮಾಡುವ ಮನಸ್ಥಿತಿ ಇರಲಿ. ಕಣ್ಣಿವೆ ಮುಚ್ಚದೆ ನಮ್ಮ ದೇಶದ ಗಡಿಯನ್ನು ಕಾಯುತ್ತಿರುವ ಅವರಿಂದಲೇ ನಾವು ನಿಶ್ಚಿಂತೆಯಿಂದ ಕಣ್ತುಂಬ ನಿದ್ರಿಸಲು ಸಾಧ್ಯ ಎಂಬ ಅರಿವಿರಲಿ ಎಂಬ ಆಶಯದೊಂದಿಗೆ..

## ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯಕ್ಕೆ ಪ್ರವೇಶಾತಿಗೆ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರದ ಬಾಲಕರ ಹಾಗೂ ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ 2025–26ನೇ ಸಾಲಿಗೆ ಹೊಸದಾಗಿ ಪ್ರವೇಶ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗ ಇತರೆ ವರ್ಗದದ ಪಿಯುಸಿ, ಐಟಿಐ ಮತ್ತು ಡಿಪ್ಲೋಮೋ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು, ಜೂನ್ 20 ರೊಳಗಾಗಿ ವೆಬ್‌ಸೈಟ್ https://shp.karnataka.gov.in/bcwd ಮೂಲಕ ಅರ್ಜಿ ಸಲ್ಲಿಸಬಹುದು. ತಾಲೂಕಿನ ಚಿತ್ತವಾಡ್ಗಿ, ಎಪಿಎಂಸಿ ಆವರಣ, ಚಪ್ಪರದಹಳ್ಳಿ, ಸಂಕ್ಲಾಪುರದ ಮೆಟ್ರಿಕ್ ನಂತರದ, ಬಾಲಕರ ವಿದ್ಯಾರ್ಥಿ ನಿಲಯಗಳು ಹಾಗೂ ಆರ್‌ಟಿಓ ಆಫೀಸ್ ಹಿಂಭಾಗದ ಎರಡು ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯದಲ್ಲಿ ಪ್ರವೇಶ ಪಡೆಯಬಹುದಾಗಿದೆ. ವಿದ್ಯಾರ್ಥಿ ನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ವೆಬ್‌ಸೈಟ್ www.bcwd.karnataka.gov.in ನ್ನು ನೋಡಬಹುದಾಗಿದೆ ಹಾಗೂ ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳು ಇದ್ದಲ್ಲಿ bcwdhelpline@gmail.com ಇ–ಮೇಲ್ ಮುಖಾಂತರ ಅಥವಾ ಹೆಚ್ಚಿನ ಮಾಹಿತಿಗಾಗಿ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಕಚೇರಿಗೆ ಸಂಪರ್ಕಿಸಬಹುದು ಎಂದು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

## ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಕ್ಕೆ ಪ್ರವೇಶಾತಿಗೆ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನ

### 5–10ನೇ ತರಗತಿ ವಿದ್ಯಾರ್ಥಿಗಳು ಜೂ.16 ರೊಳಗೆ ಸಲ್ಲಿಸಿ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೆಟ್ರಿಕ್ ಪೂರ್ವ ಬಾಲಕರ ಹಾಗೂ ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ 2025–26ನೇ ಸಾಲಿಗೆ ಹೊಸದಾಗಿ ಪ್ರವೇಶ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗ, ಇತರೆ ವರ್ಗಗಳಿಗೆ ಸೇರಿದ 05 ರಿಂದ 10 ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು, ಜೂನ್ 16 ರೊಳಗಾಗಿ ವೆಬ್‌ಸೈಟ್ https://shp.karnataka.gov.in/bcwd ಮೂಲಕ ಅರ್ಜಿ ಸಲ್ಲಿಸಬಹುದು. ಪ್ರವರ್ಗ–1, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ಮಿತಿ ರೂ.2.50 ಲಕ್ಷ ರೂ, ಪ್ರವರ್ಗ–2ಎ, 2ಬಿ,3ಎ, 3ಬಿ, ವರ್ಗದ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ಮಿತಿ ರೂ.1 ಲಕ್ಷದೊಳಗಿರಬೇಕು. ತಾಲೂಕಿನ ಜಿ.ನಾಗಲಾಪುರ, ಹೊಸಪೇಟೆ ನಗರ ಹಾಗೂ ಕಮಲಾಪುರದಲ್ಲಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಹೊಸಪೇಟೆ ನಗರದಲ್ಲಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯದಲ್ಲಿ ಪ್ರವೇಶ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ www.bcwd.karnataka.gov.in ನ್ನು ಸಂಪರ್ಕಿಸ ಬಹುದು ಎಂದು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಿಲಾಯುಗದ ಬೇಟೆಗಾರರ ವರ್ಣಚಿತ್ರಗಳ ಶೋಧನೆ



**ಸಾಹಿತಿ ಶೇಖರಯ್ಯ ಟಿ.ಎಚ್. ಎಂ, ಗ್ರಾಮಸ್ಥರಾದ ನಾಗರಾಜ, ಪಾಲಯ್ಯ, ರಾಮಮೂರ್ತಿ ಮತ್ತು ನಂದೀಶ ತಂಡದಿಂದ ಶೋಧನೆ**

**ಮೊದಲ ಪುಟದಿಂದ**

ಈ ಅವಧಿಯಲ್ಲಿ ಜನವಾಸ ಮಾಡಿದ ಸಾಂಸ್ಕೃತಿಕ ಕುರುಹುಗಳಾಗಿವೆ. ಬಂಡೆಯ ಸಮೀಪದಲ್ಲಿ ಇರುವ ಹೊಂಡ, ಒರಳುಗಳು, ಗೋಟುಗುಣಿ ಆಟದ (ಏಳುಗುಣಿಗಳ ಎರಡು ಸಾಲುಗಳು)ಕುಣಿಗಳು, ಸಾಕಷ್ಟು ಗುಹೆಗಳು ಇರುವುದು ಜನವಸತಿಗೆ ಸ್ಪಷ್ಟ ಸಾಕ್ಷಿಯಾಗಿದೆ. ಇದೇ ಮಾದರಿಯ ನೆಲೆಗಳನ್ನು ಗುಡೆಕೋಟೆ, ಜರ್ಮಲಿ, ಬ್ರಹ್ಮಗಿರಿ, ಹಾಲಸಾಗರ, ಹರಪನಹಳ್ಳಿ ತಾಲೂಕಿನ ಎರಬಳ್ಳಿ, ಉಚ್ಚಂಗಿದುರ್ಗ ಮೊದಲಾದ ಕಡೆಗಳಲ್ಲಿ ಕಾಣಬಹುದೆಂದು ತಿಳಿಸಿದರು. ಈ ನೆಲೆಯ ಸಂಶೋಧನೆಯನ್ನು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನದಾಗಿ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಬೆಟ್ಟದ ಮೇಲೆ ವಿಜಯನಗರ ಅಥವಾ ವಿಜಯನ ಗರೋತ್ತರ ಕಾಲದ ಕೋಟೆ ಗೋಡೆಗಳನ್ನು ಕಾಣಬಹುದು. ಬೆಟ್ಟದ ಮಧ್ಯ ಭಾಗದಲ್ಲಿ ನಾಯಕ ಜನಾಂಗದ ಆರಾಧನೆಯ ಶ್ರೀ ಗುಂಡೋಬಳೇಶ್ವರ ದೇವರಿದೆ. ಬೆಟ್ಟದ ಮೇಲೆ ಸಾಗುವಾಗ ಮೂರು ಕಡೆ ಮುಖ್ಯದ್ವಾರ ಬಾಗಿಲ ಕುರುಹುಗಳಿವೆ (ಈಗ ಅವಶೇಷಗಳು ಮಾತ್ರ ಉಳಿದಿವೆ) ಇವಷ್ಟೇ ಅಲ್ಲದೆ ಬೆಟ್ಟದ ಮೇಲೆ ಏಳು ಮಕ್ಕಳ ತಾಯಿಯ ಹೊಂಡ, ಸೇದುವಬಾವಿ, ಅಸಂಖ್ಯಾತ ಒರುಳುಗಳು, ಗುಡ್ಡದ ಸುತ್ತಲೂ ಕಟ್ಟಿರುವ ಕೋಟೆಯ ಅವಶೇಷಗಳನ್ನು ಕಾಣಬಹುದು. ಈ ವರ್ಣಚಿತ್ರಗಳ ಬಗೆಗೆ ಯಾವುದೇ ರೀತಿಯ ವರದಿಗಳು ಇದುವರೆಗೂ ಎಲ್ಲಿಯೂ ಪ್ರಕಟವಾಗಿಲ್ಲ ಎನ್ನುತ್ತಾರೆ ಸಾಹಿತಿ ಶೇಖರಯ್ಯ ಟಿ.ಎಚ್.ಎಂ.

# ಶ್ರೀ ಹುಲಿಗೆಮ್ಮ ದೇವಿ ಜಾತ್ರಾ ಮಹೋತ್ಸವ


## ಮೇ 22ರವರೆಗೆ ಮದ್ಯ ಮಾರಾಟ ನಿಷೇಧಿಸಿ ಜಿಲ್ಲಾಧಿಕಾರಿ ಆದೇಶ

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ತಾಲ್ಲೂಕಿನ ಹುಲಿಗಿ ಗ್ರಾಮದಲ್ಲಿ ಶ್ರೀ ಹುಲಿಗೆಮ್ಮ ದೇವಿ ಜಾತ್ರಾ ಮಹೋತ್ಸವ ನಡೆಯಲಿರುವ ಹಿನ್ನೆಲೆಯಲ್ಲಿ ಜಾತ್ರೆ ಸಮಯದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ಜರುಗದಂತೆ ಹಾಗೂ ಕಾನೂನು ಸುವ್ಯವಸ್ಥೆ ಮತ್ತು ಶಾಂತಿ ಪಾಲನೆಗಾಗಿ ಮತ್ತು ಸಾರ್ವಜನಿಕ ಹಿತಾಸಕ್ತಿ ಕಾಪಾಡುವ ಹಿತದೃಷ್ಟಿಯಿಂದ ಮೇ 22 ರ ಬೆಳಿಗ್ಗೆ 06 ಗಂಟೆಯವರೆಗೆ ಹುಲಿಗಿ ಹಾಗೂ ಹುಲಿಗಿ ಗ್ರಾಮದ ಸುತ್ತಲಿನ 5 ಕಿ.ಮೀ ವ್ಯಾಪ್ತಿಯವರೆಗೆ ಕರ್ನಾಟಕ ಅಬಕಾರಿ ಕಾಯ್ದೆ–1965 ರ ಕಲಂ 21 ರನ್ವಯ ಮದ್ಯ ಮಾರಾಟವನ್ನು ನಿಷೇಧಿಸಿ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಆದೇಶ ಹೊರಡಿಸಿದ್ದಾರೆ.

ಈ ವಿಷಯವಾಗಿ ಅಬಕಾರಿ ಉಪ ಆಯುಕ್ತರ ನೇತೃತ್ವದಲ್ಲಿ ತನಿಖಾ ತಂಡವನ್ನು ರಚಿಸಿ, ಅದರಲ್ಲಿ ಆರಕ್ಷಕರ ವೃತ್ತ ನಿರೀಕ್ಷಕರು ಹಾಗೂ ಅಬಕಾರಿ ವೃತ್ತ ನಿರೀಕ್ಷಕರು ಕಾರ್ಯನಿರ್ವಹಿಸಲು ಆದೇಶಿಸಿದೆ. ಈ ಆದೇಶವನ್ನು ಅನುಷ್ಠಾನ 'ಗೊಳಿಸುವಲ್ಲಿ ನಿರ್ಲಕ್ಷತನ ತೋರಿದವರ ವಿರುದ್ಧ ಕಾನೂನು ರೀತಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.



## ತುಂಗಭದ್ರಾ ನೀರಿನ ಮಟ್ಟ

ಬುಧವಾರ : 21–05–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1587.92 ಅಡಿ |
| ಒಳ ಹರಿವು | 9378 ಕ್ಯುಸೆಕ್ |
| ಹೊರ ಹರಿವು | 2094 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 9.379 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1577.52 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 0 ಕ್ಯುಸೆಕ್ |
| ಸಾಮರ್ಥ್ಯ | 3.384 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ವಿಶ್ವಾವಸು

**22–05–2025 – ಗುರುವಾರ**

| | |
|---|---|
| ತಿಥಿ | : ದಶಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಪೂ.ಭಾದ್ರಪದ |
| ಯೋಗ | : ವಿಷ್ಕುಂಭ |
| ಕರಣ | : ವಾಣಿಜ |
| ಸೂರ್ಯೋದಯ | : 05:44:22 |
| ಸೂರ್ಯಾಸ್ತ | : 19:03:07 |
| ರಾಹು ಕಾಲ | : 14:04–15:43 |
| ಯಮಘಂಡ ಕಾಲ | : 05:44–07:24 |
| ಗುಳಿಕ ಕಾಲ | : 09:04–10:44 |

# ಕಿರಿದಾದ ರಸ್ತೆಗಳನ್ನ ತ್ವರಿತವಾಗಿ ವಿಸ್ತರಿಸಿ

## ಸಂಸದೆ ಡಾ.ಪ್ರಭಾಮಲ್ಲಿಕಾರ್ಜುನ್ ಹೇಳಿಕೆ । ಅಂಡರ್ ಪಾಸ್, ಸೇವಾ ರಸ್ತೆ ಸ್ಥಾಪಿಸಿ ಮುಕ್ತ ಸಂಚಾರಕ್ಕೆ ಅನುವು ಮಾಡಿಕೊಡಿ

■ **ಹಂಪಿ ಟೈಮ್ಸ್ ದಾವಣಗೆರೆ**

ಜಿಲ್ಲೆಯ ವಿವಿಡೆಡೆ ಬಾಕಿ ಇರುವ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ, ಹಲವೆಡೆ ಕಿರಿದಾದ ರಸ್ತೆ ಹಾಗೂ ಅಂಡರ್ ಪಾಸ್, ಸೇವಾ ರಸ್ತೆ ಸ್ಥಾಪಿಸಿ ಮುಕ್ತ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಸಂಸದರಾದ ಡಾ;ಪ್ರಭಾ ಮಲ್ಲಿಕಾರ್ಜುನ್ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಆಯೋಜಿಸಲಾಗಿದ್ದ ರಸ್ತೆ ಸುರಕ್ಷತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ನಗರದ ಎಸ್.ಎಸ್.ಹೈಟೆಕ್ ಮುಖ್ಯ ಆಸ್ಪತ್ರೆಯ ಮುಖ್ಯ ದ್ವಾರ ರಾಷ್ಟ್ರೀಯ ಹೆದ್ದಾರಿ–48ರ, ಚೈನೇಜ್ ಅಂಡರ್ ಪಾಸ್ ಬಳಿ ಭಾರಿ ವಾಹನ, ನಗರ ಸಾರಿಗೆ, ಲಾರಿ, ಬಸ್ ವಾಹನಗಳು ಸಂಚರಿಸುತ್ತಿವೆ. ಇಲ್ಲಿನ ಕೆಳ ಸೇತುವೆ ತುಂಬಾ ಕಿರಿದಾಗಿದ್ದು, ಸಂಚಾರ ದಟ್ಟಣೆ ಹೆಚ್ಚಾಗಿದೆ. ಈ ಕುರಿತು ಮಾಹಿತಿ ಪಡೆದ ಸಂಸದೆ ಶೀಘ್ರದಲ್ಲಿಯೇ ಇದನ್ನು ಪರಿಶೀಲಿಸಿ ಸಮಗ್ರ ಮಾಹಿತಿ ಒದಗಿಸಬೇಕು ಎಂದು ಹೆದ್ದಾರಿ ಪ್ರಾಧಿಕಾರ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಷ್ಟೇ ಅಲ್ಲದೇ ಕೆಲವು ರಾಷ್ಟ್ರೀಯ ಹೆದ್ದಾರಿ ಅಂಡರ್ ಪಾಸ್‌ಗಳಲ್ಲಿ ಸೂಕ್ತವಾದ ಬೆಳಕಿನ ವ್ಯವಸ್ಥೆ ಇಲ್ಲಾ. ಸಂಜೆ ಹಾಗೂ ರಾತ್ರಿಯ ಸಮಯದಲ್ಲಿ ಸಾರ್ವಜನಿಕರು, ಮಹಿಳೆಯರು, ವಿದ್ಯಾರ್ಥಿಗಳು ಸಂಚರಿಸುತ್ತಿರುತ್ತಾರೆ. ಅವರುಗಳಿಗೆ ತೊಂದರೆಯಾಗದಂತೆ ಅಗತ್ಯವಿರವ ಕಡೆ ಕ್ಯಾರೇಜ್–ವೇ ಹೆಚ್ಚಿಸುವುದರ ಜೊತೆಗೆ ಬೆಳಕಿನ ವಿದ್ಯುತ್‌ದೀಪದ ವ್ಯವಸ್ಥೆ ಮಾಡಬೇಕು. ಇದರಿಂದ ಕಳ್ಳತನ, ಅಪಘಾತ ಸೇರಿದಂತೆ ಇನ್ನಿತರೆ ಅಹಿತಕರ ಘಟನೆಗಳು ಜರುಗುವ ಸಂಭವ ಕಡಿಮೆಯಾಗುತ್ತದೆ ಎಂದ ಅವರು, ಮಳೆಗಾಲ ಆರಂಭವಾಗಿದೆ, ಹಲವೆಡೆ ನೀರು ನಿಲ್ಲುವ ಕುರಿತು ವರದಿ, ಆರೋಪ ಕೇಳಿ



ಬರುತ್ತಿವೆ. ಆದ್ದರಿಂದ ಅಂತಹ ಸ್ಥಳಗಳನ್ನು ಗುರುತಿಸಿ ಸರಿಪಡಿಸಬೇಕು ಎಂದರು.

ಹರಿಹರ ತಾಲ್ಲೂಕಿನ ಹರಗನಹಳ್ಳಿ ಹಾಗೂ ಆನಗೋಡು, ಹೆಬ್ಬಾಳು ಬಳಿ ಏಕಾ–ಏಕಿ ತಿರುವು ಪಡೆದುಕೊಳ್ಳುವ ವಾಹನಗಳಿಗೆ ಡಾಬಾ ಹೋಟೆಲ್, ಪೆಟ್ರೋಲ್ ಬಂಕ್, ಇನ್ನಿತರೆ ಅಂಗಡಿ ಮುಂಗಟ್ಟುಗಳು ಅವೈಜ್ಞಾನಿಕಮತ್ತುಅನಧಿಕೃತವಾಗಿನಿರ್ಮಿಸಿರುವುದರಿಂದ ಅಪಘಾತ ಹೆಚ್ಚಾಗುತ್ತಿವೆ. ಅಲ್ಲಿನ ಅನಧಿಕೃತ, ಮತ್ತು ನಿಯಮಬಾಹಿರವಾಗಿ ಇರುವವರ ಮೇಲೆ ಸೂಕ್ತ ಕ್ರಮಕೈಗೊಳ್ಳುವಂತೆ ಸೂಚನೆ ನೀಡಿದರು.

ಟೋಲ್‌ಗಳಲ್ಲಿ ಎನ್‌ಪಿಆರ್ ನಂಬರ್ ಪ್ಲೇಟ್ ನೊಂದಣಿ ಮಾಡಿಕೊಳ್ಳುವ ಉತ್ತಮ ಗುಣಮಟ್ಟದ ಸಿಸಿಟಿವಿ ಮತ್ತು ಬೆಳಕಿನ ವಿದ್ಯುದೀಪಗಳನ್ನು ಕಡ್ಡಾಯವಾಗಿ ಅಳವಡಿಸಬೇಕು ಎಂದು ನಿರ್ದೇಶಿಸಿದರು. ಇದಕ್ಕೆ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಸಕರಾತ್ಮಕವಾಗಿ ಸ್ಪಂದಿಸಿ ಸೂಕ್ತ ಕ್ರಮಕೈಗೊಳ್ಳಲಾಗುವುದು ಸಭೆಗೆ ಮಾಹಿತಿ ನೀಡಿದರು.

ಜಿಲ್ಲಾ ವ್ಯಾಪ್ತಿಯಲ್ಲಿ ಪ್ರತಿ 70 ಕಿ.ಮೀ ವ್ಯಾಪ್ತಿಗೆ 2 ಅಂಬುಲೆನ್ಸ್ ವ್ಯವಸ್ಥೆ ಕಲ್ಪಿಸಬೇಕು. ಯಾವುದೇ ರೀತಿಯ ಅಪಘಾತಗಳು ಸಂಭವಿಸಿದಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕೂಡಲೇ ಸ್ಪಂದಿಸಬೇಕು. ಪ್ರಾಧಿಕಾರದ ಸಹಾಯವಾಣಿ ಸಂಖ್ಯೆ 1033 ಸಂಖ್ಯೆ ಸರಿಯಾದ ರೀತಿಯಲ್ಲಿ ಬಳಕೆಯಾಗುತ್ತಿಲ್ಲ. ಆದ್ದರಿಂದ ಸಹಾಯವಾಣಿ ಸಂಖ್ಯೆಯನ್ನು ಸ್ಥಳೀಯ ಭಾಷೆಯಲ್ಲಿ ಸಂವಹನ ನಡೆಸಲು ಸಹಾಯವಾಗುವಂತೆ ಕ್ರಮವಹಿಸಬೇಕು. ಕೆಲವು ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿ ಇದ್ದಾಗ ಅಪಘಾತಗಳು ಸಂಭವಿಸಿದಲ್ಲಿ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ತುರ್ತು ಗಮನಹರಿಸಿ ಸರಿಯಾದ ಸಂದರ್ಭದಲ್ಲಿ ಅಂಬುಲೆನ್ಸ್, ರಕ್ಷಣೆ ಮಾಡುವ ಮೂಲಕ ಸ್ಪಂದಿಸಲು ತಿಳಿಸಿದರು.

ಅದೇ ರೀತಿ ಜಿಲ್ಲೆಯಲ್ಲಿ ಹಾದು ಹೋಗಿರುವ ಕುಂದವಾಡ ರಸ್ತೆಯಲ್ಲಿ ಸೇವಾ ರಸ್ತೆ ನಿರ್ಮಿಸಿಲ್ಲ. ಸೂಕ್ತ ಚರಂಡಿ ವ್ಯವಸ್ತೆ ಕಲ್ಪಿಸದ ಕಾರಣ ಮಳೆ ನೀರು ಸಂಪೂರ್ಣ ಮನೆಗಳಿಗೆ ನುಗ್ಗಿ ಅವಾಂತರ ಸೃಷ್ಠಿಯಾಗಿದೆ. ಇಂತಹ ಅವೈಜ್ಞಾನಿಕವಾದ ಕಾಮಗಾರಿ ನಿರ್ಮಿಸಿರುವುದಕ್ಕೆ ಅಸಮಧಾನ ವ್ಯಕ್ತಪಡಿಸಿದರು. ರಸ್ತೆಯ ಇಕ್ಕೆಲಗಳಲ್ಲಿ ಗಿಡಗಂಟಿಗಳು ಬೆಳೆದು ನಿಂತಿದ್ದು, ಸಾರ್ವಜನಿಕರಿಗೆ, ಸವಾರರಿಗೆ ತೊಡಕುಂಟಾಗಿರುವ ಕುರಿತು ದೂರುಗಳು ಕೇಳಿ ಬರುತ್ತಿವೆ. ಆದ್ದರಿಂದ ತ್ವರಿತವಾಗಿ ತೆರವು ಮಾಡಿಸಿಸುವ ಮೂಲಕ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ಅನುಕೂಲ ಮಾಡಿಕೊಡಲು ತಿಳಿಸಿದರು.

ಹೂವಿನ ಗೂಡಂಗಡಿಗಳಿಗೆ ಶಾಶ್ವತ ಪರಿಹಾರ ಕಲ್ಪಿಸಲು ಸೂಚನೆ: ನಗರದ ಪಿ.ಬಿ ರಸ್ತೆಯ ದೇವರಾಜ ಅರಸು ವೃತ್ತದ ಬಳಿ ಇರುವ ಬಿಎಸ್‌ಎನ್‌ಎಲ್ ಕಚೇರಿಯ ಮುಂಭಾಗ ಸುಮಾರು 15–15 ಹೂವಿನ ಗೂಡಂಗಿಡಿಗಳಿದ್ದು, ಅವರುಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ವಾಹನ ಸಂಚಾರಕ್ಕೆ ಅಡ್ಡಿಪಡಿಸದಂತೆ ತಾತ್ಕಾಲಿಕವಾಗಿ ಸೂಕ್ತಕ್ರಮವಹಿಸಬೇಕು. ತದನಂತರದ ದಿನಗಳಲ್ಲಿ ಒಂದೆಡೆ ಶಾಶ್ವತ ಸ್ಥಳ ಗುರುತಿಸಿ ಸ್ಥಳಾಂತರಿಸುವ ಕಾರ್ಯ ಮಾಡಬೇಕು ಎಂದು ಪಾಲಿಕೆ ಅಧಿಕಾರಿಗಳಿಗೆ ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ ತಿಳಿಸಿದರು.

ಆಟೋರಿಕ್ಷಾಗಳಿಗೆ ಮೀಟರ್ ಮತ್ತು ಡಿಸ್ಲೇ ಬೋರ್ಡ್ ಕಡ್ಡಾಯ: ನಗರದಲ್ಲಿನ ಆಟೋ ಚಾಲಕರಿಗೆ ಮೀಟರ್ ಮತ್ತು ಡಿಸ್ಲೇ ಬೋರ್ಡ್ ಕಡ್ಡಾಯವಾಗಿ ಅಳವಡಿಸಿಕೊಳ್ಳುವಂತೆ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಆಟೋ ಚಾಲಕ ಸಂಘದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇಲ್ಲಿಯವರೆಗೂ ನಗರದಲ್ಲಿ 525 ಆಟೋರಿಕ್ಷಾಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ. ಇನ್ನೂ ಮುಂದೆಯೂ ಮಾಡಲಾಗುವುದು ಆದ್ದರಿಂದ ಮೊದಲು ಮೀಟರ್ ಮತ್ತು ಡಿಸ್ಲೇ ಬೋರ್ಡ್ ಅಳವಡಿಕೊಂಡಲ್ಲಿ ತಮ್ಮ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಲಾಗುವುದು ಎಂದರು.

ಈ ವೇಳೆ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ನರೇಂದ್ರಬಾಬು, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವಿಜಯ್ ಕುಮಾರ್ ಎಂ ಸಂತೋಷ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಹಾಂತೇಶ್, ವಿಭಾಗೀಯ ನಿಯಂತ್ರಣಾಧಿಕಾರಿ ಫಕ್ರುದ್ದೀನ್, ಡಿಹೆಎಚ್‌ಓ ಡಾ.ಷಣ್ಮುಖಪ್ಪ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

**ಮೈಕ್ರೋ ನ್ಯೂಸ್**

## ಒಳಮೀಸಲಾತಿ ಸಮೀಕ್ಷೆ ಸ್ವಯಂ ಘೋಷಣೆಗೆ ಅನ್‌ಲೈನ್‌ನಲ್ಲಿ ಅವಕಾಶ

**ಹಂಪಿ ಟೈಮ್ಸ್ ಹೊಸಪೇಟೆ**

ಶ್ರೀನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ ದಾಸ್‌ರವರ ಏಕಸದಸ್ಯ ವಿಚಾರಣಾ ಆಯೋಗದ ನಿರ್ದೇಶನದಂತೆ ಪರಿಶಿಷ್ಟ ಜಾತಿ ಒಳಮೀಸಲಾತಿ ವರ್ಗೀಕರಣ ಸಮೀಕ್ಷೆ ನಡೆಯತ್ತಿದ್ದು, ಒಂದು ವೇಳೆ ಕೈ ಬಿಟ್ಟು ಹೋದಂತಹ ಕುಟುಂಬದವರು ಆನ್‌ಲೈನ್ ಲಿಂಕ್ ಮೂಲಕ ಸ್ವಯಂ ಘೋಷಣೆ ಮಾಡಿ ಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಜಿಲ್ಲೆಯ ಮನೆ ಮನೆ ಭೇಟಿ ನೀಡಿ ಸಂದರ್ಭದಲ್ಲಿ ತಮ್ಮ ಮಾಹಿತಿಯನ್ನು ನೀಡದವರು ನೇರವಾಗಿ ಆನ್‌ಲೈನ್ ಲಿಂಕ್ https://schedulecatesurvey.karnataka.gov.in/selfdeclaraion ರ ಮೂಲಕ ಮೇ.19 ರಿಂದ ಮೇ.28 ರವರೆಗೆ ಸ್ವಯಂಘೋಷಣೆ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ. ಆನ್‌ಲೈನ್‌ನಲ್ಲಿ ಸ್ವಯಂಘೋಷಣೆ ಹೇಗೆ ಮಾಡಿಕೊಳ್ಳಬೇಕು ಎಂಬುದರ ಬಗ್ಗೆ https://youtu.be/VASEcMhL930 ಮೂಲಕ ತಿಳಿದುಕೊಳ್ಳಬಹುದು. ಎಲ್ಲಾ ಪರಿಶಿಷ್ಟಜಾತಿಯ ಬಾಂಧವರು ತಮ್ಮ ಜಾತಿ, ಉಪಜಾತಿ ವಿವರಗಳನ್ನು ದಾಖಲಾತಿಗಳನ್ನು ಉಪಯೋಗಿಸಿಕೊಳ್ಳಲು ಸ್ವಯಂ ದೃಢೀಕರಣ ಮಾಡಿಕೊಳ್ಳಬಹುದು. ಪರಿಶಿಷ್ಟ ಜಾತಿಗೆ ಸೇರಿದ ಜನಾಂಗದವರು ತಮ್ಮ ಮೂಲ ಜಾತಿಯನ್ನು ತಪ್ಪದೇ ಆನ್‌ಲೈನ್ ಮುಖಾಂತರ ಸ್ವಯಂ ಘೋಷಣೆ ಮಾಡಿಕೊಳ್ಳಲು ಸಾರ್ವಜನಿಕರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ ಎಂದು ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಎಸ್ಸೆಸ್ಸೆಲ್ಸಿ ಪರೀಕ್ಷೆ–2ನ್ನು ವ್ಯವಸ್ಥಿತವಾಗಿ ನಡೆಸಿ

## ಜಿಲ್ಲಾಧಿಕಾರಿ ನಲಿನ್ ಅತುಲ್ ಸೂಚನೆ । ಮೇ 26 ರಿಂದ ಜೂನ್ 2ರ ವರೆಗೆ ಪರೀಕ್ಷೆ



■ **ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆ–2 ಅನ್ನು ವ್ಯವಸ್ಥಿತವಾಗಿ ನಡೆಸಬೇಕು ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿದರು.

ಅವರು ಬುಧವಾರ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ 2025ನೇ ಸಾಲಿನ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆ–2ರ ಕುರಿತಂತೆ ಶಾಲಾ ಶಿಕ್ಷಣ ಇಲಾಖೆಯಿಂದ ಹಮ್ಮಿಕೊಳ್ಳಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ಎಸ್.ಎಸ್.ಎಲ್.ಸಿ ಪರೀಕ್ಷೆ–2ರ ಪರೀಕ್ಷೆಗಳು ಮೇ 26 ರಿಂದ ಜೂನ್ 2ರ ವರೆಗೆ ಜರುಗಲಿದ್ದು, ಯಾವುದೇ ಅಕ್ರಮ ಚಟುವಟಿಕೆಗೆ ಅವಕಾಶ ಕೊಡದೇ ಮುಕ್ತ ಹಾಗೂ ನ್ಯಾಯ ಸಮ್ಮತವಾಗಿ ಪರೀಕ್ಷೆಗಳನ್ನು ನಡೆಸಬೇಕು. ಪರೀಕ್ಷೆ ಬರೆಯುವ ವಿದ್ಯಾರ್ಥಿ ಗಳಿಗೆ ಸೂಕ್ತ ಆಸನದ ವ್ಯವಸ್ಥೆ, ಅಗತ್ಯ ಕುಡಿಯುವ ನೀರು ಮತ್ತು ಶೌಚಾಲಯಗಳ ವ್ಯವಸ್ಥೆಯನ್ನು ಸಹ ಕಲ್ಪಿಸಲು ಆಯಾ ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಅಗತ್ಯ ಕ್ರಮ ಕೈಗೊಳ್ಳಬೇಕು. ಪ್ರಶ್ನೆಪತ್ರಿಕೆ ಖಜಾನೆ ಇಲಾಖೆಗೆ ಠೇವಣಿಯಲ್ಲಿರಿಸಿ, ಪರೀಕ್ಷಾ ದಿನದಂದು ಖಜಾನೆಯಿಂದ ಪ್ರಶ್ನೆ ಪತ್ರಿಕೆಗಳನ್ನು ತೆಗೆದು ಕೊಂಡು ನಿಗದಿತ ಅವಧಿಯೊಳಗೆ ಪರೀಕ್ಷಾ ಕೇಂದ್ರಗಳಿಗೆ ತಲುಪಿಸುವ ಹೊಣೆ ಆಯಾ ಮಾರ್ಗಾಧಿಕಾರಿಗಳಿಗೆ ವಹಿಸಲಾಗಿದ್ದು, ವಿಳಂಬಕ್ಕೆ ಅವಕಾಶವಿಲ್ಲದಂತೆ ನಿಗದಿತ ಸಮಯದಲ್ಲಿ ಪ್ರಶ್ನೆಪತ್ರಿಕೆಗಳನ್ನು ತಲುಪಿಸಬೇಕು. ಪರೀಕ್ಷಾ ಕೇಂದ್ರದೊಳಗೆ ಯಾವುದೇ ಬಗೆಯ ಮೊಬೈಲ್ ಫೋನ್, ಕ್ಯಾಲ್ಕುಲೇಟರ್ ಅಥವಾ ಇನ್ನಿತರೆ ಎಲೆಕ್ಟ್ರಾನಿಕ್ ಉಪಕರಣಗಳನ್ನು ಒಯ್ಯುವುದನ್ನು ನಿಷೇಧಿಸಲಾಗಿದೆ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.




ಸಮಯಕ್ಕೆ ಸರಿಯಾಗಿ ಪರೀಕ್ಷಾ ಕೇಂದ್ರಗಳಿಗೆ ತೆರಳಲು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಅಗತ್ಯ ಬಸ್ ವ್ಯವಸ್ಥೆ, ಪರೀಕ್ಷಾ ದಿನದಂದು ಪರೀಕ್ಷಾ ಕೇಂದ್ರಗಳಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಕೈಗೊಳ್ಳಬೇಕು. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಹಾಗೂ ಪರೀಕ್ಷಾ ಕಾರ್ಯಕ್ಕೆ ನಿಯೋಜನೆಗೊಂಡ ಶಿಕ್ಷಕರು, ಅಧಿಕಾರಿ, ಸಿಬ್ಬಂದಿಗಳನ್ನು ಹೊರತುಪಡಿಸಿ, ಇನ್ನುಳಿದವರ ಪ್ರವೇಶಕ್ಕೆ ಅವಕಾಶ ನೀಡಬಾರದು. ಪರೀಕ್ಷಾ ಕೇಂದ್ರದ 200 ಮೀಟರ್ ಸುತ್ತಲು ನಿಷೇಧಾಜ್ಞೆ ಜಾರಿಗೊಳಿಸಲಾಗುವುದು. ಪರೀಕ್ಷೆ ನಡೆಸುವುದಕ್ಕೆ ಸಂಬಂಧಿಸಿದಂತೆ ಸರ್ಕಾರದ ಸೂಚನೆಗಳನ್ನು ಎಲ್ಲ ಅಧಿಕಾರಿಗಳು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಶ್ರೀಶೈಲ ಬಿರಾದಾರ ಅವರು ಮಾತನಾಡಿ, ಈ ಬಾರಿಯ ಎಸ್.ಎಸ್.ಎಲ್.ಸಿ ಪರೀಕ್ಷೆ–2ಕ್ಕೆ ಜಿಲ್ಲೆಯ ಒಟ್ಟು 10,351 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದು, ಜಿಲ್ಲೆಯ ಗಂಗಾವತಿ ತಾಲ್ಲೂಕಿನ 10, ಕೊಪ್ಪಳ ತಾಲ್ಲೂಕಿನ 10, ಕುಷ್ಟಗಿ ತಾಲ್ಲೂಕಿನ 8 ಹಾಗೂ ಯಲಬುರ್ಗಾ ತಾಲ್ಲೂಕಿನ 7 ಸೇರಿದಂತೆ ಒಟ್ಟು 35 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ. ಪ್ರತಿ ಪರೀಕ್ಷಾ ಕೇಂದ್ರಕ್ಕೆ ಒಬ್ಬ ಮುಖ್ಯ ಅಧೀಕ್ಷಕರು ಹಾಗೂ ಪ್ರಶ್ನೆಪತ್ರಿಕೆ ಅಭಿರಕ್ಷಕರನ್ನು ನೇಮಿಸಲಾಗಿದೆ ಹಾಗೂ ಕೊಪ್ಪಳ, ಗಂಗಾವತಿ, ಕುಷ್ಟಗಿ ಮತ್ತು ಯಲಬುರ್ಗಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಆಯಾ ವಿಭಾಗಗಳ ಪ್ರಶ್ನೆ ಪತ್ರಿಕೆ ಪಾಲಕರಾಗಿರುತ್ತಾರೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಗದೀಶ ಸೇರಿದಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ವಿಷಯ ಪರಿವೀಕ್ಷಕರು, ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು, ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯ ತಾಲ್ಲೂಕು ನೋಡಲ್ ಅಧಿಕಾರಿಗಳು, ಸಂಬಂಧ ಪಟ್ಟ ಇಲಾಖೆಗಳ ಅಧಿಕಾರಿಗಳು ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

# ವಾಯುಭಾರ ಕುಸಿತದಿಂದ ರಾಯಚೂರಿನಲ್ಲಿ 4 ದಿನ ನಿರಂತರ ಮಳೆ

## ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ಡಿಸಿ ಸೂಚನೆ

■ **ಹಂಪಿ ಟೈಮ್ಸ್ ರಾಯಚೂರು**

ಹವಾಮಾನ ಇಲಾಖೆ ವರದಿಯಂತೆ ವಾಯುಭಾರ ಕುಸಿತದಿಂದ ರಾಯಚೂರು ಜಿಲ್ಲೆಯಲ್ಲಿ ನಿರಂತರ ಮಳೆಯಾಗುತ್ತಿದೆ. ಇನ್ನು ನಾಲ್ಕು ದಿನ ಮಳೆ ಮುಂದುವರೆಯುವ ಸಾಧ್ಯತೆ ಇದ್ದು ಅಧಿಕಾರಿಗಳು ಮತ್ತು ಸಿಬ್ಬಂದಿ ಮುಂಜಾಗ್ರತೆ ವಹಿಸಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಮಳೆ ಸುರಿಯುವ ವೇಳೆ ಜಿಲ್ಲೆಯ ಯಾವುದೇ ಕಡೆಗಳಲ್ಲಿ, ಯಾವುದೇ ಸಂದರ್ಭದಲ್ಲಿ ಭಾರಿ ಮಳೆಯಾಗಿ ಪ್ರವಾಹ ಬರಬಹುದಾಗಿದೆ. ಆದ್ದರಿಂದ ಈ ಕುರಿತು ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದ್ದಾರೆ.

ಜಿಲ್ಲಾ, ತಾಲೂಕು, ಹೋಬಳಿ ಹಾಗೂ ಗ್ರಾಮ ಪಂಚಾಯತ್ ಮಟ್ಟದ ಅಧಿಕಾರಿ ಹಾಗೂ ಸಿಬ್ಬಂದಿಗಳು ಕೇಂದ್ರ ಸ್ಥಾನದಲ್ಲಿದ್ದು, ಪ್ರವಾಹ ಅಥವಾ ಭಾರಿ ಮಳೆಯಿಂದ ಯಾವುದೇ ಅಹಿತಕರ ಘಟನೆಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು., ಭಾರಿ ಮಳೆಯಿಂದ ಉಂಟಾಗುವ ನೆರೆ ಪರಿಸ್ಥಿತಿಯನ್ನು ನಿಭಾಯಿಸಲು ನಗರ ಮತ್ತು ಗ್ರಾಮೀಣ ಪ್ರದೇಶದ ತಗ್ಗು ಪ್ರದೇಶಗಳಲ್ಲಿರುವ ಜನರನ್ನು ಗುರುತಿಸಿ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಬೇಕು. ಅವಶ್ಯಕವೆನಿಸಿದರೆ ಕಾಳಜಿ ಕೇಂದ್ರಗಳನ್ನು ಪ್ರಾರಂಭಿಸಬೇಕು.

ನದಿ, ಹಳ್ಳ, ಕೆರೆ ದಡದಲ್ಲಿ ಬಟ್ಟೆ ತೊಳೆಯುವುದು, ಈಜಾಡುವುದು, ದನ ಹಾಗೂ ಕರುಗಳನ್ನು ಮೆಯಿಸುವುದು ಹಾಗೂ ಅಪಾಯವಿರುವ ಸೇತುವೆಗಳಲ್ಲಿ ಸಂಚರಿಸುವುದು ಮತ್ತು ಇತರೆ ಚಟುವಟಿಕೆ ನಡೆಸದಂತೆ ಕ್ರಮವಹಿಸಬೇಕು. ನದಿ, ಹಳ್ಳ, ಕೆರೆ ದಡದಲ್ಲಿರುವ ಗುಡಿ, ಮಸಿದಿ ಅಥವಾ ಚರ್ಚಗಳಲ್ಲಿ ಪೂಜೆ ಸಲ್ಲಿಸುವವರನ್ನು ಮನ ಒಲಿಸಿ ನದಿ, ಹಳ್ಳ, ಕೆರೆ ದಡದಲ್ಲಿ ತೆರಳದಂತೆ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು.

ನಿರಂತರ ಮಳೆಯಿಂದ ಅಪಾಯವಿರುವ ಮನೆ, ಗೋಡೆ, ಶಾಲೆಗಳು ಹಾಗೂ ಇತರೆ ಕಟ್ಟಡಗಳು ಕುಸಿಯುವ ಸಾಧ್ಯತೆ ಇರುವುದರಿಂದ ಸಾವು ನೋವುಗಳು ಸಂಭವಿಸುವ ಸಂದರ್ಭವಿರುತ್ತದೆ. ಆದ್ದರಿಂದ ಸಾರ್ವಜನಿಕರಿಗೆ ಸುರಕ್ಷತೆಯ ಮುನ್ನೆಚ್ಚರಿಕೆಯ ಕ್ರಮ ತೆಗೆದುಕೊಳ್ಳುವುದು ಅಥವಾ ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಜಾಗೃತಿ ಮೂಡಿಸಬೇಕು.

ನದಿ ದಡದ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರು ಅಪಾಯವಿರುವ ನದಿ ಅಥವಾ ಹಳ್ಳಗಳಲ್ಲಿ ಈಜಾಡುವುದು ಮತ್ತು ಫೋಟೋ ಅಥವಾ ಸೆಲ್ಫಿಗಳನ್ನು ತೆಗೆಯದಂತೆ ಕ್ರಮವಹಿಸಬೇಕು. ಭಾರಿ ಮಳೆ ಅಥವಾ ಪ್ರವಾಹದಿಂದ ಯಾವುದೇ ಅಹಿತಕರ ಘಟನೆಯಾಗದಂತೆ ಪ್ರತಿ ಗ್ರಾಮಗಳಲ್ಲಿ ಡಂಗೂರ ಸಾರುವುದು ಹಾಗೂ ಮೈಕ್ ಮೂಲಕ ಜಾಗೃತಿ ಮೂಡಿಸಬೇಕು.

ಪ್ರಕೃತಿ ವಿಕೋಪದಿಂದ ಯಾವುದೇ ರೀತಿಯ ಘಟನೆಗಳು ಸಂಭವಿಸಿದಲ್ಲಿ ಅಥವಾ ಸಂಭವಿಸಬಹುದಾದ ಸೂಚನೆ ಇದ್ದಲ್ಲಿ ಸಾರ್ವಜನಿಕರು ಕೂಡಲೇ ಸಂಬಂಧಪಟ್ಟ ಪಂಚಾಯತ್, ನಗರ ಸ್ಥಳೀಯ ಸಂಸ್ಥೆಗಳಿಗೆ ಮಾಹಿತಿ ನೀಡಬೇಕು. ನಿರ್ಲಕ್ಷ್ಯವಹಿಸುವಂತಹ ಅಧಿಕಾರಿ ಹಾಗೂ ಸಿಬ್ಬಂದಿಗಳ ಮೇಲೆ ವಿಪತ್ತು ನಿರ್ವಹಣಾ ಕಾಯ್ದೆ–2005 ರಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭಯೋತ್ಪಾದನಾ ವಿರೋಧಿ ದಿನ, ಪ್ರಮಾಣವಚನ ಭೋದನೆ

■ **ಹಂಪಿ ಟೈಮ್ಸ್ ಹೊಸಪೇಟೆ**

ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಛೇರಿಯಲ್ಲಿ. ಭಯೋತ್ಪಾದನಾ ವಿರೋಧಿ ದಿನದ ಆಚರಣೆಯನ್ನು ತಾಲ್ಲೂಕು ಅರೋಗ್ಯ ಅಧಿಕಾರಿ ಡಾ ಬಸವರಾಜ ಅಧ್ಯಕ್ಷತೆಯಲ್ಲಿ ಪ್ರಮಾಣವಚನ ಭೋದನೆ ಮಾಡಲಾಯಿತು. ಜಿಲ್ಲಾ ಕ್ಷೇತ್ರ ಅರೋಗ್ಯ ಶಿಕ್ಷಣಾಧಿಕಾರಿಗಳಾದ.ಎಂ.ಪಿ.ದೊಡಮನಿ. ಜಿಲ್ಲಾ ಅರೋಗ್ಯ ನಿರೀಕ್ಷಣಾಧಿಕಾರಿ ಎಂ.ಧರ್ಮನಗೌಡ. ಮಂಜುನಾಥ ಅರೋಗ್ಯ ನಿರೀಕ್ಷಣಾಧಿಕಾರಿ ಕಛೇರಿ ಸಿಬ್ಬಂದಿಗಳಿದ್ದರು.





ಕೊಪ್ಪಳದಲ್ಲಿ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳಿಗೆ ಪ್ರಮಾಣ ವಚನವನ್ನು ಬೋಧಿಸಿದರು.